ತೆಗೆದುಕೊಂಡು ಏನೇನು ಮಾಡಬೇಕು, ಯಾವುದಕ್ಕೆ ಹೆಚ್ಚು ಆದ್ಯತೆ ಕೊಡಬೇಕೆಂಬ ನಿಟ್ಟಿನಲ್ಲಿ ಅಧಿಕಾರಿಗಳ ಜೊತೆ ತಾವು ಚರ್ಚೆ ಮಾಡಬೇಕು. ಇವತ್ತು ಆ ಹಣವನ್ನು ಎಲ್ಲಿ ಬಳಕೆ ಮಾಡಿಕೊಂಡಿದ್ದಾರೆ? ಕಳೆದ ಎರಡು ವರ್ಷಗಳಿಂದ ರಸ್ತೆಗೆ ಕೊಟ್ಟಿದ್ದರು. ಆದರೆ ಅದು ಸಾಕಾಗುವುದಿಲ್ಲ. ನಾವು ಎಲ್ಲಿ ಹೆಚ್ಚು ಆದಾಯ ಕೊಡುತ್ತೇವೆಂದರೆ ಉದಾಹರಣೆಗೆ ಶಿವಮೊಗ್ಗದಂತಹ ಜಿಲ್ಲೆ. ಇವತ್ತು ಗುಟ್ಕಾ ನಿಷೇಧ ಮಾಡಿದ್ದರಿಂದ ಇಡೀ ಅಡಕೆ ಮಾರುಕಟ್ಟೆ ನಿಂತುಹೋಗಿ15 ದಿವಸವಾಯಿತು. ರೈತರು ಕಂಗಾಲಾಗಿದ್ದಾರೆ. ಅವರ ಸಹಾಯಕ್ಕೆ ಯಾರೂ ಇವತ್ತು ಬರುತ್ತಿಲ್ಲ. ದಯಮಾಡಿ ಅವರ ಸಹಾಯಕ್ಕೆ ಸರ್ಕಾರ ಬರಬೇಕು. ಸರ್ಕಾರದ ಕಡೆಯಿಂದ ಕೇಂದ್ರಕ್ಕೆ ಒಂದು ಪತ್ರವನ್ನು ಬರೆಯಬೇಕಾಗುತ್ತದೆ. ಗುಟ್ಕಾ ನಿಷೇಧ ಹೇರಿ ಈ ರೀತಿ ಬಳಕೆದಾರರ ಮೇಲೆ ಬಹಳ ದೊಡ್ಡ ಆದಾಯ ಕೊಡತಕ್ಕ ಬೆಳೆಯ ಮೇಲೆ ತುಂಬಾ ದೊಡ್ಡ ಗದಾಪ್ರಹಾರ ಆಗುತ್ತಿದೆ. ಆದ್ದರಿಂದ ರೈತರ ಪರಿಸ್ಥಿತಿ ಈ ರೀತಿ ಆಗುತ್ತಿದೆ ಎಂದು ನಮ್ಮ ಸರ್ಕಾರದ ಕಡೆಯಿಂದ ಒಂದು ಪತ್ರ ಹೋಗಲಿ. ಕೇಂದ್ರ ಸರ್ಕಾರಕ್ಕೆ ಒಂದು ಶಿಫಾರಸ್ಸಿನ ಪತ್ರವನ್ನು ತಾವು ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಚರ್ಚೆ ಮಾಡಿ ಬರೆಯಬೇಕು. ನಾವು ಕೋಟಿ ಗಟ್ಟಲೆ ಹಣವನ್ನು ಶಿವಮೊಗ್ಗ ಜಿಲ್ಲೆಯಿಂದ ಕೊಡುತ್ತಿದ್ದೇವೆ. ತೀರ್ಥಹಳ್ಳಿ ತಾಲ್ಲೂಕಿನಿಂದ ಎಷ್ಟೋ ಹಣ ಕೊಡುತ್ತಿದ್ದೇವೆ. ನೀವು ನಮಗೆ ನಮ್ಮ ಎರಡು ತಾಲ್ಲೂಕುಗಳಿಗೆ ಕೊಡತಕ್ಕದ್ದು 15+15 =30 ಲಕ್ಷ ರೂಪಾಯಿಗಳನ್ನು ನೇರವಾಗಿ ಕೊಡುತ್ತಿದ್ದೀರಿ. ಆದರೆ ಅದಲ್ಲ, ನಮಗೆ ನೀವು ದಾಮಾಷಾ ಪ್ರಕಾರ ಕೊಡಿ. ಅಲ್ಲಿಗೆ ಹೆಚ್ಚು ಹಣ ಕೊಡಬೇಕು. ಹೆಚ್ಚು ಆದಾಯ ಕೊಡತಕ್ಕ ಜಿಲ್ಲೆಗಳಿಗೆ, ಜಿಲ್ಲೆಗಳ ರೈತರಿಗೆ ಹೆಚ್ಚು ಹಣವನ್ನು ಕೊಟ್ಟು ಆ ಭಾಗವನ್ನು ಅಭಿವೃದ್ಧಿಪಡಿಸಬೇಕೆಂದು ವಿನಂತಿಸಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ನಿಲುವಳಿ ಸೂಚನೆ

ಮಂಗಳೂರಿನಲ್ಲಿ ಜನಸಾಮಾನ್ಯರ ಸೇವೆಯನ್ನು ಮಾಡುವ ಮೂರು ಜನ ಶಾಸಕರ ಮೇಲೆ ಅಲ್ಲಿನ ಜಿಲ್ಲಾಧಿಕಾರಿಗಳು ಕೇಸ್ ದಾಖಲಿಸಿರುವುದು.

+ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ಕೊಟ್ಟಿರತಕ್ಕ ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡಬಯುಸುತ್ತೇನೆ. ಮಂಗಳೂರಿನಲ್ಲಿ ಜನಸಾಮಾನ್ಯರ ಸಮಸ್ಯೆಗಳನ್ನು ತೆಗೆದುಕೊಂಡು ಭಾರತೀಯ ಜನತಾ ಪಕ್ಷದ 3 ಜನ ಶಾಸಕರು..........

ಉಪಾಧ್ಯಕ್ಷರು : ಅದನ್ನು ಗಮನ ಸೆಳೆಯುವ ಸೂಚನೆಯಲ್ಲಿ ತೆಗೆದುಕೊಳ್ಳೋಣ. ನೀವು ಸರ್ಕಾರದ ಗಮನ ಸೆಳೆದರೆ ಅವರು ಉತ್ತರ ಹೇಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಬಹಳ ಮಹತ್ವದ ವಿಷಯ ಇದೆ. ಮೂರು ಜನ ಶಾಸಕರ ಮೇಲೆ ಡಿ.ಸಿ.ಯವರು ಸುಳ್ಳು ಕೇಸ್ ಹಾಕಿದ್ದಾರೆ. ಇವತ್ತು ಬೆಳಿಗ್ಗೆ ನಾವು ಈ ದಿನದ ಎಲ್ಲ ಕಾರ್ಯಕಲಾಪಗಳನ್ನು ಬದಿಗೊತ್ತಿ ಇದನ್ನು ತೆಗೆದುಕೊಳ್ಳಬೇಕು, ಇದು ಮಹತ್ವದ ವಿಷಯ ಇದೆ ಇಲ್ಲಿ ಶಾಸಕರು ಕುಳಿತು ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆಂದು ವಿನಂತಿ ಮಾಡಿದ್ದೆವು. ಆದರೂ ತಾವು

ಡಿಮ್ಯಾಂಡ್ ಮೇಲಿನ ಚರ್ಚೆ ತೆಗೆದುಕೊಂಡಿರಿ. ಇದನ್ನು ಪ್ರಸ್ತಾಪ ಮಾಡಿದರೆ ಪತ್ರಿಕೆಗಳಲ್ಲಿ ಹೈಲೈಟ್ ಆಗುತ್ತದೆ, ಆದ್ದರಿಂದ ಅತ್ಯಂತ ಕಡಿಮೆ ಅವಧಿಯಲ್ಲಿ ತಮ್ಮ ಗಮನ ಸೆಳೆಯುವಂತ ಪ್ರಯತ್ನ ಮಾಡುತ್ತೇವೆ.

5.20 ಪಿ.ಎಂ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, ಇಡೀ ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷ ಜನಸಾಮಾನ್ಯರ ಸಮಸ್ಯೆಗಳನ್ನು ತೆಗೆದುಕೊಂಡು ಹೋರಾಟ ಮಾಡಬೇಕೆಂದು 13ನೇ ತಾರೀಖು ಎಲ್ಲ ಜಿಲ್ಲಾಧಿಕಾರಿಗಳ ಕಛೇರಿಗಳ ಮುಂದೆ ರಾಜ್ಯದ ಜನತೆಯ ಸಮಸ್ಯೆಯ ಬಗ್ಗೆ ಮನವಿಯನ್ನು ಕೊಡಬೇಕೆಂದು ಹೋದಂತಹ ಸಂದರ್ಭದಲ್ಲಿ ಮಂಗಳೂರಿನಲ್ಲಿ ಮೂರು ಜನ ಶಾಸಕರು ಎನ್. ಯೋಗೀಶ್ ಭಟ್, ಕೆ. ಜಯರಾಮಶೆಟ್ಟಿ ಮತ್ತು ಕುಂಬ್ಳೆ ಸುಂದರರಾವ್ ಇವರ ನೇತೃತ್ವದಲ್ಲಿ ಅನೇಕ ಕಾರ್ಯಕರ್ತರು ಜಿಲ್ಲಾಧಿಕಾರಿಗಳ ಕಛೇರಿಗೆ ಹೋಗಿ ಮನವಿಯನ್ನು ಕೊಡುವಂತಹ ಸಂದರ್ಭದಲ್ಲಿ ನಡೆದಂತಹ ಒಂದು ವಿಚಿತ್ರ ಘಟನೆ. ಮೂರು ದಿನ ಮುಂಚೆಯೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದರ ಬಗ್ಗೆ ಪ್ರಚಾರವಾಗಿತ್ತು. ಜನಸಾಮಾನ್ಯರ ಸಮಸ್ಯೆಗಳನ್ನು ತೆಗೆದುಕೊಂಡು ಈ ರೀತಿಯ ಒಂದು ನಿಯೋಗ ಹೋಗುತ್ತಿದೆ ಮೆರವಣಿಗೆ ಹೋಗುತ್ತಿದೆಯೆಂದು ಪ್ರಚಾರ ಮಾಡಿದ್ದರೂ ಸಹ ರಾಜ್ಯ ಸರ್ಕಾರ ನೂರಾರು ಜನ ಪೋಲೀಸರನ್ನು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ವ್ಯವಸ್ಥೆ ಮಾಡಿದರು, ರಕ್ಷಣೆಯ ದೃಷ್ಟಿಯಿಂದ. ಆದರೆ ಈ ಮನವಿಯನ್ನು ತೆಗೆದುಕೊಳ್ಳುವುದಕ್ಕೆ ಒಬ್ಬ ಅಧಿಕಾರಿ ಇರಲಿಲ್ಲ. ಜಿಲ್ಲಾಧಿಕಾರಿ ಇಲ್ಲ, ಅಸಿಸ್ಟೆಂಟ್ ಕಮೀಷನರ್ ಇಲ್ಲ ಯಾವುದೇ ಅಧಿಕಾರಿಯಿಲ್ಲ. ಆದರೂ ಕೂಡ ಬಹಳ ಹೊತ್ತು ಶಾಂತಿಯಿಂದ ನಮ್ಮ ಶಾಸಕರ ನೇತೃತ್ವದಲ್ಲಿ ಎಲ್ಲ ಕಾರ್ಯಕರ್ತರು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ನಮ್ಮ ಸಮಸ್ಯೆಗಳನ್ನು ಅವರ ಮುಖಾಂತರ ರಾಜ್ಯ ಸರ್ಕಾರಕ್ಕೆ ಕಳುಹಿಸುತ್ತೇವೆ ಅಲ್ಲಿಯತನಕ ನಾವು ಹೋಗುವುದಿಲ್ಲವೆಂದು ಎಷ್ಟೇ ಹೊತ್ತು ಕೂತರು ಕೂಡ ಯಾವುದೇ ಅಧಿಕಾರಿ ಕೊನೆಯತನಕ ಬರಲಿಲ್ಲ. ಕೊನೆಗೆ ಏನು ಮಾಡಿದರು, ಶಾಸಕರು ಗತಿಯಿಲ್ಲದೆ ಯಾವುದೇ ಅಧಿಕಾರಿ ಇಲ್ಲವೆಂದು ಹೇಳಿ ಸರ್ಕಾರ ಬದುಕಿದೆಯೋ ಸತ್ತಿದೆಯೋ ಎಂದು ಅನುಮಾನವಿಲ್ಲದೆ ಸರ್ಕಾರ ಸತ್ತಿದೆಯೆಂದು ಹೇಳಿ ಆವೊಂದು ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳ ಕಛೇರಿಯ ಕಂಬಕ್ಕೆ ಅಂಟಿಸಿ ಬಂದರು. ಇದು ನಮ್ಮ ಸ್ಥಿತಿ. ಮೂರು ದಿನ ಮುಂಚೆ ಜನಸಾಮಾನ್ಯರ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೋಸ್ಕರ ಬರುತ್ತಿದ್ದಾರೆ. ಆ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದಾರೆಂದು ಪ್ರಕಟಣೆಯನ್ನು ಕೊಟ್ಟಾಗ ಪೋಲೀಸ್‌ನವರನ್ನು ತೆಗೆದುಕೊಂಡು ಹೋಗಿ ನಿಲ್ಲಿಸಲಿಕ್ಕೆ ಬರುತ್ತದೆ. ಅಲ್ಲಿನ ಸಮಸ್ಯೆಯನ್ನು ಪರಿಹಾರ ಮಾಡುವ ದೃಷ್ಟಿಯಿಂದ ಅವರು ಕೊಡತಕ್ಕ ಮನವಿಯನ್ನು ಸ್ವೀಕಾರ ಮಾಡುವುದಕ್ಕೂ ಸಹ ಅಧಿಕಾರಿಗಳನ್ನು ನೇಮಕ ಮಾಡುವುದರಲ್ಲಿ ಸರ್ಕಾರ ವಿಫಲವಾದರೆ ನಿಜಕ್ಕೂ ಕೂಡ ಇದು ತುಂಬಾ ನಾಚಿಕೆಗೇಡು. ಅಲ್ಲಿಂದ ಮುಂದೆ ನಡೆದಿರವುದೇನು ? ಕೊನೆಗೆ ಈ ಮೂರು ಜನ ಶಾಸಕರು ಮತ್ತು ಅಲ್ಲಿಯ ನಮ್ಮ ಪಕ್ಷದ ಕಾರ್ಪೊರೇಟರ್ ಅವರು ಮಹಾನಗರ ಪಾಲಿಕೆಯಲ್ಲಿ ನಮ್ಮ ಪಕ್ಷದ ನಾಯಕರು. ಮಾನ್ಯ ನಾರಾಯಣಶೆಟ್ಟಿಯವರು ಮತ್ತು ಪ್ರಭಾಕರ ಬಂಗೇರ ನಮ್ಮ ನಾಯಕರು,

ಎಲ್ಲರೂ ಕೂಡ ಹೋಗಿ ಕಂಬಕ್ಕೆ ಅಂಟಿಸಿ ಬಂದಮೇಲೆ ಸರ್ಕಾರ ಪೋಲೀಸ್ ಇಲಾಖೆಯ ಮುಖಾಂತರ ಎಫ್‌ಐಆರ್ ಹಾಕಿಸುತ್ತಿದ್ದಾರೆ. ಜಿಲ್ಲಾಧಿಕಾರಿ ಕಛೇರಿಯ ಛೇಂಬರ್ ನೊಳಗೆ ಅತಿಕ್ರಮ ಪ್ರವೇಶ ಮಾಡಿದ್ದಾರೆಂದು ಬರೆಯುತ್ತಿದ್ದಾರೆ. ಜಿಲ್ಲಾಧಿಕಾರಿಗಳ ಕಛೇರಿ ಅತಿಕ್ರಮ ಪ್ರವೇಶ, ಯಾರಪ್ಪನ ಆಸ್ತಿ ಜಿಲ್ಲಾಧಿಕಾರಿಗಳ ಕಛೇರಿ? ಆ ಎಫ್‌ಐಆರ್‌ನಲ್ಲಿ ಬರೆಯುತ್ತಿದ್ದಾರೆ ದಿನಾಂಕ 13.4.98ರಂದು ಪೂರ್ವಾಹ್ನ11.45ರಿಂದ 12 ಗಂಟೆಯ ಸಮಯ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಮತ್ತು ಮೂರು ಜನ ವಿಧಾನಸಭಾ ಸದಸ್ಯರು ಶ್ರೀ ಎನ್. ಯೋಗೀಶ್ ಭಟ್, ಕೆ. ಜಯರಾಮಶೆಟ್ಟಿ ಮತ್ತು ಕುಂಬ್ಳೆ ಸುಂದರರಾವ್ ಮತ್ತಿತರರು ಅಕ್ರಮಕೂಟ ಸೇರಿ ಜಿಲ್ಲಾಧಿಕಾರಿಗಳ ಕಛೇರಿಯ ಛೇಂಬರ್‌ನೊಳಗೆ ಅತಿಕ್ರಮಣ ಪ್ರವೇಶ ಮಾಡಿದ್ದಾರೆಂದು ಬರೆಯುತ್ತಾರೆ. ಜಿಲ್ಲಾಧಿಕಾರಿಗಳ ಕಛೇರಿ ಯಾರಪ್ಪನ ಆಸ್ತಿಯೆಂದು ಸರ್ಕಾರಕ್ಕೆ ನಾನು ಪ್ರಶ್ನೆ ಕೇಳಬೇಕಾಗುತ್ತದೆ. ಎಫ್.ಐ.ಆರ್.ನಲ್ಲಿ ಬರೆಯುತ್ತಿದ್ದಾಗ, ದಿನಾಂಕ 13-4-98ರಂದು ಪೂರ್ವಾಹ್ನ 11.45ರಿಂದ 12ಗಂಟೆಯ ಸಮಯ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಹಾಗೂ ಮೂರು ಜನ ವಿಧಾನ ಸಭಾ ಸದಸ್ಯರಾದ ಶ್ರೀ ಎನ್. ಯೋಗೀಶ್ ಭಟ್, ಕೆ.ಜಯಶಾಮ್ ಶೆಟ್ಟಿ ಮತ್ತು ಕುಂಬ್ಳೆಸುಂದರ್ ರಾವ್ ಮತ್ತಿತರರು ಅಕ್ರಮಕೂಟ ಸೇರಿ ಜಿಲ್ಲಾಧಿಕಾರಿಗಳ ಛೇಂಬರಿನೊಳಗೆ ಅತಿಕ್ರಮಣ ಪ್ರವೇಶ ಮಾಡಿ ಮನವಿ ಸಲ್ಲಿಸಲು ಜಿಲ್ಲಾಧಿಕಾರಿಯವರು ಹಾಜರಿಲ್ಲದ ಕಾರಣ ಕೋಪೋದ್ರಿಕ್ತಗೊಂಡು ಮನವಿ ಪತ್ರವನ್ನು ಛೇಂಬರ್ ಕಂಬಕ್ಕೆ ಅಂಟಿಸಿ ಕಾನೂನು ಉಲ್ಲಂಘನೆ ಮಾಡಿರುವುದಾಗಿ ಎಂಬಿತ್ಯಾದಿ ಇದಕ್ಕೆ ಏನೆಂದು ಕರೆಯಬೇಕು? ಅಧಿಕಾರಿಗಳು ಯಾರೂ ಇಲ್ಲ ಕಾದು ಕಾದು ಕೊನೆಗೆ ಸಾಕಾಗಿ ಯಾರೋ ಒಬ್ಬ ಕಛೇರಿಯ ಅಸಿಸ್ಟೆಂಟ್ ಬಂದು ಕೇಳುತ್ತಾನೆ. ಮನವಿ ಪತ್ರವನ್ನು ನನ್ನ ಕೈಯಲ್ಲಿ ಕೊಡಿಯೆಂದು. ಅವನ ಕೈಯಲ್ಲಿ ನಾವು ಕೊಟ್ಟ ಹೋಗಬೇಕಂತೆ, ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ, ಆಹಾರ ಅಧಿಕಾರಿಗಳನ್ನು ಕರೆಸಿ, ತಹಶೀಲ್ದಾರ್‌ರವರನ್ನು ಕರೆಸಿಯೆಂದು ಇವರು ಎಷ್ಟೇ ಕೇಳಿಕೊಂಡರೂ ಕೂಡ ಮೂರು ದಿನ ಮುಂಚೆ ಪ್ರಕಟ ಮಾಡಿದ್ದರೂ ಕೂಡ ಯಾರೂ ಅಧಿಕಾರಿಗಳು ಅಲ್ಲಿ ಇರಲಿಲ್ಲ. ಕೊನೆಗೆ ಇವರ ಮೇಲೆ ಎಫ್‌ಐಆರ್ ಹಾಕುತ್ತಿದ್ದಾರೆ. ಹಾಗಾದರೆ ಇನ್ನು ಮುಂದೆ ಹೋರಾಟ ಮಾಡುವುದೇ ತಪ್ಪಾ ಎಂದು ನಾನು ಕೇಳುತ್ತಿದ್ದೇನೆ. ಹೋರಾಟಕ್ಕೂ ಈ ಸರ್ಕಾರ ಹೀಗೆ ಮಾಡಬೇಕಾದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಸಾಮಾನ್ಯರ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಟ ಮಾಡುವಂತಹ ಶಾಸಕರನ್ನು ಅವರು ಜಿಲ್ಲಾಧಿಕಾರಿಗಳ ಕಛೇರಿಗೆ ಹೋದರೆ ಕಛೇರಿಯಲ್ಲಿ ಇವರು ಹೇಳುತ್ತಿದ್ದಾರೆ. ಜಿಲ್ಲಾಧಿಕಾರಿಗಳ ಕಛೇರಿಗೆ ಅತಿಕ್ರಮಣ ಪ್ರವೇಶ ಮಾಡಿದ್ದಾರೆ ಎಂದು ಹಾಗಾದರೆ ಅದು ಅವರ ಅಪ್ಪನ ಆಸ್ತಿನಾ ಎಂದು ನಾನು ಕೇಳಲಿಕ್ಕೆ ಇಷ್ಟಪಡುತ್ತೇನೆ. ಎಫ್‌ಐಆರ್ ಹಾಕಿ ಕಂಪ್ಲೇಂಟ್ ಕೊಡುವ ಪ್ರಯತ್ನ ಯಾರು ಮಾಡಿದ್ದಾರೆ ಅವರನ್ನು ತಕ್ಷಣ ಅಮಾನತ್ತಿನಲ್ಲಿಡಬೇಕು. ಜಿಲ್ಲಾಧಿಕಾರಿಗಳನ್ನು ರಾಜ್ಯಸರ್ಕಾರದವರು ಈ ರೀತಿ ಹೋರಾಟ ಮಾಡುವಂತಹ ವಿರೋಧಪಕ್ಷದವರನ್ನು ಜನಸಾಮಾನ್ಯರ ಸಮಸ್ಯೆಗಳನ್ನು ತಮ್ಮ ಗಮನಕ್ಕೆ ತರುವಂತಹ ಪ್ರಯತ್ನ ಮಾಡುತ್ತಿರುವಂತಹ ಸಂದರ್ಭದಲ್ಲಿ ಶಾಸಕರ ಮೇಲೆ ಎಫ್‌ಐಆರ್ ಹಾಕುವಂತಹ ವ್ಯಕ್ತಿಗಳ ಮೇಲೆ ಜಿಲ್ಲಾಧಿಕಾರಿಗಳನ್ನು ತಕ್ಷಣ ಅಮಾನತ್ತಿನಲ್ಲಿಟ್ಟು ಅವರ ಮೇಲೆ ಎನ್‌ಕ್ವೈರಿ ಮಾಡಬೇಕು. ಇದು ಏನು ಅನಿಸುತ್ತದೆ ಅಧ್ಯಕ್ಷರೆ? ಇಲ್ಲಿ ಅನೇಕ ಅತಿರಥ ಮಹಾರಥರು ಕುಳಿತ್ತಿದ್ದಾರೆ. ಹೋರಾಟಗಾರರು

ಕುಳಿತಿದ್ದಾರೆ ವಿಚಾರವಾದಿಗಳು ಕುಳಿತಿದ್ದಾರೆ. ನಾನು ಹೆಚ್ಚಿಗೆ ಹೇಳುವುದಿಲ್ಲ ಮಾನ್ಯ ಪ್ರಕಾಶ್‌ರವರೇ, ಏಕೆಂದರೆ ವಿರೋಧಪಕ್ಷದವರು ಏನೋ ಒಂದು ಹೋರಾಟ ಮಾಡುತ್ತಿದ್ದಾರೆ, ಜಿಲ್ಲಾಧಿಕಾರಿಗಳನ್ನು ರಕ್ಷಣೆ ಮಾಡಬೇಕೆನ್ನುವ ಭಾವನೆ ನಿಮ್ಮಂತಹವರ ಮನಸ್ಸಿನಲ್ಲಿ ಬಂದರೆ ಖಂಡಿತಾ ಪ್ರಜಾಪ್ರಭುತ್ವ ವ್ಯವಸ್ಥೆಗೆ ಕೊಡಲಿಪೆಟ್ಟು ಕೊಡುವಂತಹ ವ್ಯಕ್ತಿಗಳಿಗೆ ನೀವು ಬೆಂಬಲ ಕೊಟ್ಟಂತಾಗುತ್ತದೆ. ಈ ರೀತಿ ಇಡೀ ರಾಜ್ಯದಲ್ಲಿ ಈ ತರಹ ಶುರುವಾಗುತ್ತದೆ. ನಾಳೆಯಿಂದಲೇ ಶುರುವಾಗುತ್ತದೆ. ಅವರು ಹೇಳುತ್ತಿದ್ದಾರೆ ಒಬ್ಬ ಕಛೇರಿ ಸಹಾಯಕರು ಜಿಲ್ಲಾಧಿಕಾರಿಗಳಿಗೆ ಕಂಪ್ಲೈಂಟ್ ಪತ್ರ ಬರೆಯುತ್ತಿದ್ದಾರೆ. ದಿನಾಂಕ 13.4.98ರಂದು ಪೂರ್ವಾಹ್ನ 11.30ವೇಳೆಗೆ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಜಿಲ್ಲಾಧಿಕಾರಿಯವರಿಗೆ ಮನವಿ ಪತ್ರ ಅರ್ಪಿಸಲು ಬಂದಿರುವ ವಿಚಾರ. ಶ್ರೀಮತಿ ಹೊರಬಾನು ಎನ್ನತಕ್ಕ ಕಛೇರಿಯ ಸಹಾಯಕರು, ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿ ಮಂಗಳೂರು. ಅವರು ಜಿಲ್ಲಾಧಿಕಾರಿಗಳಿಗೆ ಬರೆಯುತ್ತಿದ್ದಾರೆ, 13.4.98ರಂದು ಮಧ್ಯಾಹ್ನ 11.45ರ ವೇಳೆಗೆ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಸುಮಾರು 25ರಿಂದ 40 ಮಂದಿ ಕಾರ್ಯಕರ್ತರು ಮೂರು ವಿಧಾನಸಭಾ ಸದಸ್ಯರುಗಳಾದ ಎನ್. ಯೋಗೀಶ್ ಭಟ್‌ರವರು, ಕೆ. ಜಯರಾಮಶೆಟ್ಟಿ ಮತ್ತು ಕುಂಬ್ಳೆ ಸುಂದರರಾವ್ ಹಾಗೂ ಪಕ್ಷದ ಕಾರ್ಯಕರ್ತರಾದ ಕೆ. ಪ್ರಭಾಕರ ಬಂಗೇರ ನಾರಾಯಣಶೆಟ್ಟಿ ಮುಂತಾದವರು ಜಿಲ್ಲಾಧಿಕಾರಿಯವರಿಗೆ ಮನವಿಯನ್ನು ಅರ್ಪಿಸಲು ಬಂದಾಗ, ಜಿಲ್ಲಾಧಿಕಾರಿಯವರು ಕಛೇರಿಯಲ್ಲಿ ಲಭ್ಯವಿಲ್ಲದ ಕಾರಣ ಕೋಪೋದ್ರಿಕ್ತರಾಗಿದ್ದುದು ಈ ಕಛೇರಿಯ ದ್ವಿತೀಯ ದರ್ಜೆ ಸಹಾಯಕರಿಂದ ನನಗೆ ತಿಳಿದುಬಂತು. ಮನವಿ ಕೊಡುವುದಕ್ಕೆ ಹೋಗುತ್ತಿದ್ದೇವೆಂದರೆ ಇವರು ಹೇಳುತ್ತಿದ್ದಾರೆ, ಕೋಪೋದ್ರಿಕ್ತರಾಗಿದ್ದರು ಎಂದು ಹೇಳುತ್ತಿದ್ದಾರೆ. ಜಿಲ್ಲಾಧಿಕಾರಿಗಳು ಇಲ್ಲವೆಂದರೆ ಇನ್ನು ಯಾರಾದರೂ ಸಂಬಂಧಪಟ್ಟವರು ಹೆಡ್‌ಕ್ವಾರ್ಟರ್ ಅಸಿಸ್ಟೆಂಟ್ ಇರಬಹುದು ಇನ್ನು ಯಾರಾದರೂ ಬಂದು ನಾವು ಮನವಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರೆ ಈ ಪ್ರಶ್ನೆಯೇ ಬರುತ್ತಿರಲಿಲ್ಲ. ಆದರೆ ಅವರು ಕಂಪ್ಲೈಂಟ್ ಮಾಡುತ್ತಿದ್ದಾರೆ ನಾನು ಕಛೇರಿಯ ಆಪ್ತ ಸಹಾಯಕರಲ್ಲಿ ವಿಚಾರಿಸಿದಾಗ, ಜಿಲ್ಲಾಧಿಕಾರಿಗಳು ಕಛೇರಿಗೆ ಹೋಗಿಲ್ಲವೆಂದು ತಿಳಿದು ಬಂತು. ದೂರವಾಣಿ ಮುಖಾಂತರ ಕಟೀಲಿನಲ್ಲಿ ಇರುವುದಾಗಿ ತಮ್ಮ ಆಪ್ತ ಸಹಾಯಕರಿಗೆ ವಿಷಯ ತಿಳಿಸಿದಾಗ, ಅತಿ ಗಣ್ಯವ್ಯಕ್ತಿಗಳ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದಾಗಿ ತಿಳಿದುಬಂತು. ನೀವು ಹೋಗಿ ನಾವು ಬೇಡವೆನ್ನುವುದಿಲ್ಲ. ಜಿಲ್ಲಾಧಿಕಾರಿಗಳು 24 ಗಂಟೆಯೂ ಕಛೇರಿಯಲ್ಲಿರುತ್ತಾರೆಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ, ಮೂರು ದಿನ ಮುಂಚೆ ಪ್ರಕಟಣೆ ಹಾಕಿ ಮೈಕ್ ಅನೌನ್ಸ್‌ಮೆಂಟ್ ಮಾಡಿ ಕರಪತ್ರಗಳನ್ನು ಹಂಚಿ ಇದೆಲ್ಲ ಮಾಡಿದ ಮೇಲೆ ಈ ರೀತಿ ಕ್ರಮಗಳನ್ನು ತೆಗೆದುಕೊಳ್ಳುವಂತಹ ಪ್ರಯತ್ನ ನಡೆದರೆ, ಹಾಗಾದರೆ ಇನ್ನು ಮುಂದೆ ಜನಸಾಮಾನ್ಯರ ಸಮಸ್ಯೆಗಳನ್ನು ತೆಗೆದುಕೊಂಡು ಶಾಸಕರಾಗಲೀ ಕಾರ್ಯಕರ್ತರಾಗಲೀ ಯಾವುದೇ ರಾಜಕೀಯ ಪಕ್ಷಗಳು ಹೋರಾಟವನ್ನು ಮಾಡಬೇಕೋ ಬೇಡವೋ ? ಇಡೀ ರಾಜ್ಯದ ಜನತೆಯ ಮುಂದೆ ನಿಮ್ಮ ನಿಲುವೇನು ಎಂಬುದನ್ನು ತಿಳಿಸಬೇಕಾಗುತ್ತದೆ. ನಾನು ಈ ವಿಚಾರದ ಬಗ್ಗೆ ಒಂದೇ ಒಂದನ್ನು ನಿರೀಕ್ಷೆ ಮಾಡುತ್ತೇನೆ. ಏಕೆಂದರೆ ಪ್ರಜಾಪ್ರಭುತ್ವ ಉಳಿದಿರುವುದೇ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ. ವಿರೋಧಪಕ್ಷ ಸರ್ಕಾರ ಮಾಡತಕ್ಕ ತಪ್ಪನ್ನು ನಿಮ್ಮ ಗಮನಕ್ಕೆ ತರುವುದು ನಮ್ಮ ಕರ್ತವ್ಯ. ಈ ದಿಸೆಯಲ್ಲಿ

ನಮ್ಮ ಶಾಸಕರು ಪ್ರಯತ್ನ ಮಾಡುತ್ತಿರುವಂತಹ ಸಂದರ್ಭದಲ್ಲಿ ಮನವಿ ಪತ್ರ ತೆಗೆದುಕೊಳ್ಳಿಯೆಂದು ಹೇಳಿದಾಗ ಅವರ ಮೇಲೆ ಎಫ್‌ಐಆರ್ ಹಾಕಿ ಜಿಲ್ಲಾಧಿಕಾರಿಗಳ ಕಛೇರಿಗೆ ನೀವು ಅತಿಕ್ರಮಣ ಪ್ರವೇಶ ಮಾಡಿದ್ದೀರಿ ಎಂದು ಅವರ ಮೇಲೆ ಕೇಸುಗಳನ್ನು ಹಾಕಿ ಆ ಕೇಸು ನಂಬರುಗಳೆಲ್ಲ ಇವೆ. ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಆ ಕ್ಷೇತ್ರದ ಶಾಸಕರು ಯಾರ್‍ಯಾರು ಅನುಭವಿಸಿದ್ದಾರೆ ಅವರು ಹೇಳುತ್ತಾರೆ. ಸರ್ಕಾರಕ್ಕೆ ನನ್ನ ಒತ್ತಾಯ ಇಷ್ಟೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ರೀತಿ ವಿರೋಧಪಕ್ಷ ಮಾಡಿದಂತಹ ಹೋರಾಟಗಳಿಗೆ ಬೆಂಬಲ ಕೊಡಬೇಕಾದ ಕರ್ತವ್ಯ ಸಂಬಂಧಪಟ್ಟ ಅಧಿಕಾರಿಗಳದ್ದು. ಅಧಿಕಾರಿಗಳು ಸರ್ಕಾರದ ಗುಲಾಮರಲ್ಲ. ಅಧಿಕಾರಿಗಳು ಸರ್ಕಾರದ ಸೇವೆಯಲ್ಲಿರುವಂತಹ ವ್ಯಕ್ತಿಗಳು. ವಿರೋಧಪಕ್ಷದವರು ಮಾಡಿದಂತಹ ಮನವಿಯನ್ನು ಸರ್ಕಾರಕ್ಕೆ ಮುಟ್ಟಿಸುವಂತಹ ಕರ್ತವ್ಯ ಅವರದ್ದು. ಅದನ್ನು ಬಿಟ್ಟು ಸರ್ಕಾರದ ಗುಲಾಮರಂತೆ ಅವರು ವರ್ತನೆ ಮಾಡಿ ಸಂಬಂಧಪಟ್ಟ ಶಾಸಕರುಗಳ ಮೇಲೆ ಕೇಸುಗಳನ್ನು ಹಾಕಿ ಹತ್ತಿಕ್ಕುವಂತಹ ಪ್ರಯತ್ನ ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಕೊಡಲಿಪೆಟ್ಟು ಕೊಡುವಂತಹ ಕೆಲಸ ಮಾಡುತ್ತಿದ್ದಾರಲ್ಲ ಇಂತಹವರನ್ನು ತಕ್ಷಣ ಆ ಜಿಲ್ಲಾಧಿಕಾರಿಗಳವರನ್ನು ಅಮಾನತ್ತಿನಲ್ಲಿಟ್ಟು ಸಂಬಂಧಪಟ್ಟ ವ್ಯಕ್ತಿಯ ಮೇಲೆ ವಿಚಾರಣೆ ನಡೆಸಬೇಕೆಂದು ಹೇಳುತ್ತೇನೆ. ಈ ಅಧಿಕಾರಿಗಳು ಏನು ಕೇಸುಗಳನ್ನು ಹಾಕಿದ್ದಾರೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾತನಾಡಿ ಸಮಯ ವ್ಯರ್ಥ ಮಾಡುವುದಕ್ಕಿಂತ ಕ್ರಮ ತೆಗೆದುಕೊಂಡು ಬಿಡಿ. ಕ್ರಮವನ್ನು ಸರ್ಕಾರ ತೆಗೆದುಕೊಳ್ಳಲಿ. ಒಬ್ಬ ಜಿಲ್ಲಾಧಿಕಾರಿ ತನ್ನ ಕಛೇರಿಗೆ ಹೋದಾಗ ಈ ತರಹ ಕೇಸುಗಳನ್ನು ಹಾಕಿದರೆ ನಾಳೆ ದಿವಸ ಯಾರೂ ಹೋಗುವಹಾಗೆ ಇಲ್ಲ. ತಕ್ಷಣ ಅವರನ್ನು ಸಸ್ಪೆಂಡ್ ಮಾಡಿ ಕ್ರಮ ತೆಗೆದುಕೊಂಡು ಬಿಟ್ಟರೆ ಮುಗಿದುಹೋಯಿತು. ಚರ್ಚೆಯ ಅವಶ್ಯಕತೆಯಿಲ್ಲ. ಎಫ್‌ಐಆರ್ ವಾಪಸ್ಸು ತೆಗೆದುಕೊಳ್ಳಲಿ ಚರ್ಚೆ ಏಕೆ ಬೇಕು? ಚರ್ಚೆಯ ಅವಶ್ಯಕತೆಯೇ ಇಲ್ಲ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳಾದ ಪ್ರಕಾಶ್‌ರವರು ಮಾತನಾಡುತ್ತಾರೆ ಒಂದು ನಿಮಿಷ ಕೇಳ್ರಿ. ಸರ್ಕಾರದ ಪರವಾಗಿ ಅವರು ಏನೋ ಹೇಳುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಹಿರಿಯ ಶಾಸಕರಾದ ಈಶ್ವರಪ್ಪನವರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ನಡೆದಿರತಕ್ಕ ಘಟನೆಯಲ್ಲಿ ಜಿಲ್ಲಾಧಿಕಾರಿಗಳು ಮಾನ್ಯ ದೇವೇಗೌಡರು ಕಟೀಲ್ ಪವಿತ್ರಕ್ಷೇತ್ರಕ್ಕೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಅವರು ಕರ್ತವ್ಯಾಧಿಕಾರಿಯಾಗಿ ಅಲ್ಲಿಗೆ ಜಿಲ್ಲಾಧಿಕಾರಿಗಳು ಹೋಗಿದ್ದರಿಂದ ಬೇರೆ ಅಲ್ಲಿರುವ ಕಛೇರಿಯ ಮುಖ್ಯಸ್ಥ ಅದನ್ನು ಸ್ವೀಕಾರ ಮಾಡಬೇಕೆಂದು ಹೇಳಿದ್ದಾರೆ. ಆದರೆ ಕಛೇರಿಯ ಮುಖ್ಯಸ್ಥರು ಬೇಕಾಗಿಲ್ಲ ಜಿಲ್ಲಾಧಿಕಾರಿಗಳನ್ನೆ ಕರೆಸಬೇಕೆಂದು ಹೇಳಿರುವಂತಹ ಮಾಹಿತಿಗಳು ನಮಗೆ ಬಂದಿವೆ. ಅವರನ್ನು ಕರನೇ ತೀರಬೇಕೆನ್ನುವ ವಾದ ಅಲ್ಲಿ ನಡೆಯುತ್ತದೆ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಹೇಳದ ಮೇಲೆ ಕ್ಲಾರಿಫಿಕೇಶನ್ ಆಮೇಲೆ ಕೇಳಿ. ಅವರಿಗೆ ಮಾಹಿತಿ ಸಿಕ್ಕಿರುವುದನ್ನು ಅವರು ಹೇಳುತ್ತಾರೆ. ಆಮೇಲೆ ಮತ್ತೆ ನೀವು ಮಾತನಾಡಿ.

ಶ್ರೀ ಎಂ.ಪಿ. ಪ್ರಕಾಶ್ : ರೆಕಾರ್ಡ್‌ಗೆ ಸರಿಯಾಗಿರಬೇಕು, ದಾಖಲೆಗಳು ಸರಿಯಾಗಿ ಇರಬೇಕು ಎನ್ನುವ ಕಾರಣಕ್ಕಾಗಿಯೇ ಹೇಳುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಪ್ರಥಮ ವರ್ತಮಾನ ವರದಿ, ನಾನು ಇಷ್ಟಕ್ಕೇ ಸೀಮಿತವಾಗುತ್ತೇನೆ. ಶಾಸಕರಾದ ಯೋಗೀಶ್ ಭಟ್, ಕುಂಬ್ಳೆ ಸುಂದರರಾವ್ ಮತ್ತು ಜಯರಾಮ ಶೆಟ್ಟಿ, ಈ ಮೂರು ಜನ. ಈ ಪ್ರಥಮ ವರದಿಯಲ್ಲಿ 13.4.98ರಂದು 11.45ರಿಂದ 12 ಗಂಟೆಯ ಸಮಯ ಬಿಜೆಪಿ ಕಾರ್ಯಕರ್ತರು ಮತ್ತು ಮೂರು ಜನ ವಿಧಾನ ಸಭಾ ಸದಸ್ಯರಾದ ಯೋಗೀಶ್ ಭಟ್, ಕುಂಬ್ಳೆಸುಂದರರಾವ್ ಮತ್ತು ಜಯರಾಮ ಶೆಟ್ಟಿಯವರು ಅಕ್ರಮ ಕೂಟ ಸೇರಿ, ಜಿಲ್ಲಾಧಿಕಾರಿಯವರ ಕಛೇರಿ, ಚೇಂಬರುಗಳಿಗೆ ಅತಿಕ್ರಮ ಪ್ರವೇಶ ಮಾಡಿ, ಮನವಿ ಸಲ್ಲಿಸಲು, ಜಿಲ್ಲಾಧಿಕಾರಿಯವರು ಹಾಜರಿಲ್ಲದ ಕಾರಣ ಕೋಪೋದ್ರೇಕಗೊಂಡ ಮನವಿ ಪತ್ರವನ್ನು ಚೇಂರಿನ ಕಂಬಕ್ಕೆ ಅಂಟಿಸಿ ಕಾನೂನು ಉಲ್ಲಂಘನೆ ಮಾಡಿರುವುದಾಗಿ ಇದೆ ಈ ಅಕ್ರಮ ಕೂಟ, ಪ್ರವೇಶ ಇವೆಲ್ಲಾ ಮಾಡಿದಾಗ, ಅಕ್ರಮ ಕೂಟ ಎಂದರೆ ಏನು ಸಾವಿರಾರು ಜನರು ಸೇರಿ, ಭಯೋತ್ಪಾದನೆ ಉಂಟುಮಾಡಿ ಜಿಲ್ಲಾಧಿಕಾರಿಯವರ ಕಛೇರಿಗೆ ನುಗ್ಗಿ ಅವರನ್ನೆಲ್ಲಾ ಎಳೆದು, ಕುರ್ಚಿಗಳನ್ನೆಲ್ಲಾ ಹೊಡೆದು, ಹೊರಗಡೆ ಹಾಕಿ ಬೆಂಕಿ ಹಾಕತಕ್ಕಂಥಾದ್ದು ಅಕ್ರಮ ಕೂಟ. ಇದನ್ನು ಅಕ್ರಮ ಕೂಟ ಎಂದು ಹೇಳಬಹುದು. ಈ ಪರಿಸ್ಥಿತಿ ಉದ್ಭವವಾಗಬೇಕಾದರೆ, ರಾಜ್ಯದ ಪತ್ರಿಕೆಗಳಲ್ಲಿ ಪ್ರಥಮ ವರದಿ ನೋಡಿದರೆ, ರಾಜ್ಯದ ಪತ್ರಿಕೆಗಳಲ್ಲಿ ಮುಖ್ಯ ಪುಟದಲ್ಲಿಯೇ ಸ್ವಲ್ಪ ಹೆಚ್ಚು ಕಡಿಮೆ ಭಾರಿ, ಭಾರಿ ದಪ್ಪ ಅಕ್ಷರದಲ್ಲಿ ಬರಬೇಕಾಗಿತ್ತು. ಅಕ್ರಮ ಕೂಟ ಮಾಡಿದ್ದಾರೆ, ಜಿಲ್ಲಾಧಿಕಾರಿಯವರ ಕಛೇರಿಗೆ ನುಗ್ಗಿದ್ದಾರೆ ಯಾರು, ಮೂರು ಜನ ಜವಾಬ್ದಾರಿಯುತವಾದಂಥ ಶಾಸಕರು. ಅವರು ನುಗ್ಗಿದ್ದರೆ, ಅಲ್ಲಿ ಗೋಡೆ ಮೇಲೆ ಆ ಪತ್ರವನ್ನು ಅಂಟಿಸಿಬರಬೇಕಾಗಿರಲಿಲ್ಲ. ಇಲ್ಲಿರತಕ್ಕಂಥ ಅವರೇ ಹೇಳುವ ಪ್ರಕಾರ, 40 ಜನ ಕಾರ್ಯಕರ್ತರು, ಮೂರು ಜನ ಶಾಸಕರು ಸೇರಿದರೆ ಇದು ಅಕ್ರಮ ಕೂಟ ಆಗುವುದಿಲ್ಲ. ಆದ್ದರಿಂದ ಜಿಲ್ಲಾಧಿಕಾರಿ ಇಲ್ಲದಿದ್ದರೆ, ನಾವು ಎಲ್ಲಿಗೆ ಅಂಟಿಸಬೇಕು. ಜಿಲ್ಲಾಧಿಕಾರಿ ಇಲ್ಲದಿದ್ದರೆ, ಜಿಲ್ಲಾಧಿಕಾರಿ ಕಾರ್ಯಾಲಯದ ಯಾವುದಾದರೂ ಕಂಬಕ್ಕೋ ಗೋಡೆಗೋ ಅಥವಾ ಬಾಗಿಲಿಗೋ ಅಂಟಿಸಬೇಕಾದ್ದು ಕರ್ತವ್ಯ. ಆದರೆ, ಇವರು ಹಾಕಿರತಕ್ಕಂಥ ಕೇಸುಗಳು ಯಾವುವು143,147, 448 ಮತ್ತು149. ಇದು ಪೋಲೀಸಿನವರಿಗೆ ಅಭ್ಯಾಸ. ಇದಕ್ಕೆ ಬೇರೆ ಪುರಾವೆಯೇ ಬೇಕಾಗಿಲ್ಲ. ಸುಳ್ಳು ಬರೆದು, ಬರೆದು, ಅವರಿಗೆ ಅಭ್ಯಾಸವಾಗಿರುತ್ತದೆ. ಕರ್ನಾಟಕದಲ್ಲಿರತಕ್ಕ ಎಲ್ಲಾ ಪೋಲೀಸ್ ಸ್ಟೇಷನ್‌ಗಳ ಹಣೆಬರಹವೂ ಹೀಗೆಯೇ. ಅಕ್ರಮ ಕೂಟ, ದೊಂಬಿ, ಮತ್ತು ಕೊಲೆ ಮಾಡುವ ಯತ್ನ. ಈ ತರಹ ಈ ಸೆಕ್ಷನ್‌ಗಳೇನಿವೆ ಅದರಲ್ಲಿ ಈ ಮೂರು ಜನ ಶಾಸಕರು ಏನಿದ್ದಾರೆ, ಕಳೆದ ಮೂರುವರೆ ವರ್ಷಗಳಿಂದ ಈ ಶಾಸಕನ ನಡತೆಯನ್ನು ನಾವು ನೋಡಿದ್ದೇವೆ. ಒಂದು ದಿನ ಬಾಯಿಬಿಟ್ಟು ಅವರು ಜೋರಾಗಿ ಮಾತನಾಡಿದವರಲ್ಲ. ಇನ್ನು ಅವರು ಅಕ್ರಮ ಕೂಟ ಸೇರಿ, ಅಲ್ಲಿ ಮಾಡಿದರು ಎಂದು ಹೇಳಿ, ಆ ಶಾಸಕರ ಮೇಲೆ 143,148,448, 149 ಯಾವ ಅಪರಾಧಕ್ಕಾಗಿ ಈ ಕೇಸುಗಳು? ಏನು ನಡೆದಿದೆ? ಈ ಕೇಸುಗಳೆಲ್ಲಾ ಪ್ರೂವ್ ಆಗಿಹೋದರೆ ಸ್ವಲ್ಪ ಹೆಚ್ಚು ಕಡಿಮೆ 10-10 ವರ್ಷ. ಒಂದೊಂದು ನಾವು ಲೆಕ್ಕ ಹಾಕಿದರೆ, ಒಂದು ಮೂರು ವರ್ಷ, ಒಂದು ಎರಡು ವರ್ಷ, ಒಂದು ಒಂದೂವರೆ ವರ್ಷ ಹೀಗೆ ತೆಗೆದುಕೊಂಡರೆ, ಸ್ವಲ್ಪ ಹೆಚ್ಚುಕಡಿಮೆ ಈ

ಮೂರು ಜನ 10 ವರ್ಷ ಹೊರಗೆ ಬರುವಹಾಗೆಯೇ ಇಲ್ಲ. ಒಂದು ಜಿಲ್ಲೆಯ ಜಿಲ್ಲಾಧಿಕಾರಿ, ಸರ್ವಾಧಿಕಾರಿಯಲ್ಲ. ಜಿಲ್ಲಾ ಕಾರ್ಯಾಲಯಗಳು ಮಿಲಿಟರಿ ಪ್ರಭುತ್ವ ಅಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜಿಲ್ಲಾಧಿಕಾರಿಗಳ ಕಾರ್ಯಾಲಯ ಯಾವಾಗಲೂ ತೆಗೆದಿರಬೇಕು. ಸಾಮಾನ್ಯ ಜನ ಬಂದರೂ ಅವರ ಅರ್ಜಿಯನ್ನು ಸ್ವೀಕಾರ ಮಾಡಬೇಕು. ಆ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಹೋಗಿದ್ದರೆ ಅದು ಅಕ್ರಮ ಕೂಟ ಎಂದು ಹೇಳತಕ್ಕಂಥಾದ್ದೇ ಅಲ್ಲ. ಆ ಪದವನ್ನು ಅವರು ಹೇಳಲೇಬಾರದು. ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಆ ವ್ಯಾಪ್ತಿಗೆ ಬರತಕ್ಕಂಥ, ಆ ಜಿಲ್ಲೆಯ ಸಾಮಾನ್ಯ ಜನರಿಂದ ಹಿಡಿದು, ಯಾವುದೇ ವ್ಯಕ್ತಿಯಾದರೂ ಒಳಗಡೆ ಹೋಗಿ ಅರ್ಜಿ ಕೊಡುವುದಕ್ಕೆ ಅವಕಾಶ ಇದೆ. ಅದು ಅಕ್ರಮ ಕೂಟ ಆಗುವುದಿಲ್ಲ. ಎರಡನೆಯದಾಗಿ, ಸರ್ಕಾರದ ಆದೇಶದ ಪ್ರಕಾರವೇ, ಒಬ್ಬ ಶಾಸಕರು ಆ ಕಾರ್ಯಾಲಯಕ್ಕೆ ಹೋದನಂತರ, ಅಧಿಕಾರಿ ಎದ್ದುನಿಂತುಕೊಳ್ಳಬೇಕು. ಶಾಸಕರನ್ನು ಸ್ವಾಗತ ಮಾಡಬೇಕು. ಅವರ ಪ್ರಶ್ನೆ ಏನೆಂದು ಕೇಳಬೇಕು, ಮತ್ತೆ ಅವರನ್ನು ಹೊರಗೆ ಕಳುಹಿಸಿಕೊಡಬೇಕು. ಇದು ನಮ್ಮ ಶಿಷ್ಟಾಚಾರದಲ್ಲಿರತಕ್ಕಂಥದ್ದು. ಆದರೆ ಅವರು ಈ ಶಿಷ್ಟಾಚಾರವನ್ನೆಲ್ಲಾ ಗಾಳಿಗೆ ತೂರಿ, ಅಲ್ಲಿ ಕುಳಿತಿರತಕ್ಕಂಥ ಕಾರ್ಯಕರ್ತರು ಮತ್ತು ಶಾಸಕರು ಸತ್ಯಾಗ್ರಹ ಮಾಡುತ್ತಿದ್ದಾರೆ. ನೀವು ಏಕೆ ಸತ್ಯಾಗ್ರಹ ಮಾಡುತ್ತಿದ್ದೀರಿ, ಯಾವ ಉದ್ದೇಶಕ್ಕಾಗಿ ಬಂದಿದ್ದೀರಿ ಎಂದು ಕೇಳಿದ್ದರೆ, ಅವರು ಮನವಿ ಕೊಡುತ್ತಿದ್ದರು. ಅಲ್ಲೇನು ಜಿಲ್ಲಾಧಿಕಾರಿಯವರನ್ನು ಒದೆಯುವುದಕ್ಕೆ ಹೋಗಿರಲಿಲ್ಲ, ಹೊಡೆಯುವುದಕ್ಕೆ ಹೋಗಿರಲಿಲ್ಲ ಮತ್ತೇನೂ ಮಾಡುವುದಕ್ಕೆ ಹೋಗಿರಲಿಲ್ಲ. ಇಂತಹ ತಲೆಕೆಟ್ಟ ಅವಿವೇಕಿ, ದುರಹಂಕಾರಿ ಕೆಲವು ಜಿಲ್ಲಾಧಿಕಾರಿಗಳು ಇದ್ದಾರೆ. ಅದರಲ್ಲಿ ಮಂಗಳೂರು ಜಿಲ್ಲಾಧಿಕಾರಿ ಒಬ್ಬರು. ಇವತ್ತು ನಾವು ಅವರನ್ನು ಬೇರೆ ವಿಚಾರಕ್ಕೆ ಕೇಳತಕ್ಕಂತಾದ್ದಲ್ಲ. ಸರ್ಕಾರ ಕೂಡಲೇ ಅವರನ್ನು ವಜಾ ಮಾಡಬೇಕು. ಬೇರೆ ಮಾತು ಇಲ್ಲವೇ ಇಲ್ಲ. ಅವರು ಬಹಿರಂಗ ಕ್ಷಮಾಪಣೆ ಕೇಳಬೇಕು. ಈ ಸದಸ್ಯರಾಗಿರುವವರ ವಿಚಾರದಲ್ಲಿ ಸಮಗ್ರ ತನಿಖೆಯಾಗಲೇಬೇಕು. ಸಾಮಾನ್ಯ ತನಿಖೆಯಲ್ಲ, ಉನ್ನತಮಟ್ಟ ತನಿಖೆಯಾಗಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

+ಶ್ರೀ ಕೆ. ಜಯರಾಮಶೆಟ್ಟಿ : ಸನ್ಮಾನ್ಯ ಉಪಾಧ್ಯಕ್ಷರೇ, ಈ ತಿಂಗಳ 13ನೇ ತಾರೀಖಿಗೆ ನಮ್ಮ ಪಕ್ಷದ ಆದೇಶದಂತೆ, ರಾಜ್ಯಸರ್ಕಾರದ ವೈಫಲ್ಯದ ವಿರುದ್ಧ ಜಿಲ್ಲಾಧಿಕಾರಿಗಳ ಕಛೇರಿ ಎದುರು ಸುಮಾರು 150 ರಿಂದ 200 ಜನ ಕಾರ್ಯಕರ್ತರು ಧರಣಿ ಕುಳಿತುಕೊಂಡಿದ್ದೆವು. ಜಿಲ್ಲಾಧಿಕಾರಿಯ ಕಛೇರಿಯ ಗೇಟಿನ ಹೊರಭಾಗದಲ್ಲಿ ಕುಳಿತಿದ್ದೆವು. ನಾವು ಪೂರ್ವನಿಗದಿತ ಕಾರ್ಯಕ್ರಮದಂತೆ ಜಿಲ್ಲಾಧಿಕಾರಿಯವರಿಗೆ ನಮ್ಮ ಪಕ್ಷದವರೂ ತಿಳಿಸಿದ್ದರು. ಇಂಟೆಲಿಜೆನ್ಸಿಯವರೂ ಕೂಡ ಅವರಿಗೆ ವರದಿ ಮಾಡಿದ್ದರು. ಒಂದು ಗಂಟೆಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು. ಸುಮಾರು ಹತ್ತೂವರೆ ಗಂಟೆಯಿಂದ 11.30 ಗಂಟೆಯವರೆಗೆ. ಆ ಸಂದರ್ಭದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಉಪಸ್ಥಿತರಿದ್ದರು. ಸುಮಾರು ಹನ್ನೊಂದುವರೆ ಗಂಟೆಗೆ ಘೋಷಣೆಗಳನ್ನು ಕೂಗಿ, ಭಾಷಣಗಳನ್ನು ಮಾಡಿದನಂತರ, ಅಲ್ಲಿ ಕುಳಿತ ಕಾರ್ಯಕರ್ತರ ಎದುರುಗಡೆಯೇ ನಾವು ಮೂರು ಜನ ಶಾಸಕರು ಇದ್ದೆವು. ಮಂಗಳೂರು ಮಹಾನಗರ ಪಾಲಿಕೆಯ ಸುಮಾರು 10 ಜನ ಕಾರ್ಪೊರೇಟರುಗಳು ಇದ್ದರು. ನಮ್ಮ ಪಕ್ಷದ ಜಿಲ್ಲಾ ಪದಾಧಿಕಾರಿಗಳು ಇದ್ದರು. ನಾವು ಅಲ್ಲಿ ಕುಳಿತುಕೊಂಡಿದ್ದಾಗಲೇ ಜಿಲ್ಲಾಧಿಕಾರಿಗಳ

ಕಾರು ಪಾಸಾಗಿ ಹೋಯಿತು. ಅವರು ನಮ್ಮನ್ನು ನೋಡಿದರು. ಆದರೆ ಸೌಜನ್ಯ ದೃಷ್ಟಿಯಿಂದಲಾದರೂ ಕೂಡ ನೀವು ಶಾಸಕರು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ, ನಾನು ಬೇರೆ ಕಡೆಗೆ ಹೋಗುತ್ತಾ ಇದ್ದೇನೆ; ತಮ್ಮ ಮನವಿ ಏನಾದರೂ ಇದೆಯೇ? ಎಂದು ಒಂದು ಸೌಜನ್ಯಕ್ಕಾಗಿಯಾದರೂ ಅವರು ನಮ್ಮನ್ನು ಕೇಳಲಿಲ್ಲ, ನಮ್ಮ ಜೊತೆ ಮಾತನಾಡಲೂ ಇಲ್ಲ. ನೇರವಾಗಿ ಅವರು ಹೋದರು. ನಮ್ಮ ಕಾರ್ಯಕ್ರಮ ಒಂದು ಗಂಟೆ ನಂತರ, ನಾವು ಜಿಲ್ಲಾಧಿಕಾರಿಗಳ ಕಛೇರಿಯೊಳಗೆ ಹೋದೆವು. ಸಂಪ್ರದಾಯದಂತೆ ನಾವು ಎಲ್ಲಾ ಕಾರ್ಯಕರ್ತರೂ ಒಳಗೆ ಹೋಗಲಿಲ್ಲ. ನಾವು ಮೂರು ಜನ ಶಾಸಕರು ಮತ್ತು 10-15 ಜನ ನಾಯಕರುಗಳು ಜಿಲ್ಲಾಧಿಕಾರಿಗಳ ಕಛೇರಿಗೆ ಹೋದಾಗ, ಅಲ್ಲಿ ಜಿಲ್ಲಾಧಿಕಾರಿಗಳು ಉಪಸ್ಥಿತರಿರಲಿಲ್ಲ. ಅವರು ಇಲ್ಲದೇ ಇರತಕ್ಕ ಸಂದರ್ಭದಲ್ಲಿ, ಅವರ ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಇದ್ದಾರೆಯೇ ಎಂದೆ ಕೇಳಿದೆವು. ಅವರು ರಜೆಯಲ್ಲಿದ್ದಾರೆಂದರು. ಅನಂತರ ಆ ಒಂದು ಕಛೇರಿಯಲ್ಲಿರತಕ್ಕಂಥವರಾದ ಅಸಿಸ್ಟೆಂಟ್ ಕಮೀಶನರ್ ಇದ್ದಾರೆಯೇ ಎಂದು ಕೇಳಿದೆವು. ಅವರೂ ಇಲ್ಲ. ಅನಂತರ ತಹಶೀಲ್ದಾರ್ ಇದ್ದಾರೆಯೇ ಎಂದು ಕೇಳಿದೆವು, ಅವರೂ ಇಲ್ಲ. ಈ 4 ಜನ ಅಧಿಕಾರಿಗಳೂ ಇಲ್ಲದಿದ್ದರೆ, ಅವರ ನಾಲ್ಕನೇ ದರ್ಜೆ ನೌಕರ ಬಂದು ಮನವಿ ಕೊಡಿ ಎಂದು ಕೇಳಿದರೆ, ನಾವು ಕೊಡುವುದಕ್ಕೆ ಬರುತ್ತದೆಯೇ? ನಮಗೆ ಬೇಕಾಗಿರುವುದು ಜವಾಬ್ದಾರಿಯುತ ಅಧಿಕಾರಿಗಳು. ನಾವು ಹೇಳಿದೆವು, ನಾವು ಇಲ್ಲಿರುವಾಗಲೇ ಜಿಲ್ಲಾಧಿಕಾರಿಗಳು ಹೋದರು. ಅವರು ಎಲ್ಲಿದ್ದಾರೆ, ವಿಚಾರಿಸಿಕೊಂಡು ಬನ್ನಿ ಎಂದು ನಾವು ಇಲ್ಲಿ ಕಾದು ಕುಳಿತುಕೊಳ್ಳುತ್ತೇವೆಂದು ಹೇಳಿದೆವು. ನಾವು ಸುಮಾರು 40 ಜನ ಕಾರ್ಯಕರ್ತರು ಜಿಲ್ಲಾಧಿಕಾರಿಯವರ ಕಛೇರಿಯ, ಅವರ ಛೇಂಬರಿನೊಳಗೆ ಒಂದು ಗಂಟೆಯವರೆಗೆ ಧರಣಿ ಕುಳಿತುಕೊಂಡೆವು. ಸುಮಾರು ಹನ್ನೊಂದುವರೆಯಿಂದ ಒಂದು ಗಂಟೆಯವರೆಗೆ ನಾವು ಧರಣಿ ಕುಳಿತುಕೊಂಡೆವು. ಯಾವುದೇ ಅಧಿಕಾರಿಗಳು ಅಲ್ಲಿಗೆ ಬರಲಿಲ್ಲ. ನಮ್ಮ ಜಿಲ್ಲಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟ್ ಹೇಳಿದರು, ಅವರು ಕಟೀಲ್‌ನಲ್ಲಿದ್ದಾರೆ, ಮೂರು ಗಂಟೆಯವರೆಗೆ ಅವರು ಬರುವುದಕ್ಕಾಗುವುದಿಲ್ಲವೆಂದು ಹೇಳಿದರು. ಮತ್ತು ನಮಗೇ ಮನವಿ ಕೊಡಿ ಎಂದು ಹೇಳಿದರು, ಆದರೆ ಅವರು ಅಧಿಕೃತ ಅಧಿಕಾರಿಗಳಲ್ಲ. ನಮಗೆ ಜಿಲ್ಲಾಧಿಕಾರಿಗಳೇ ಬೇಕು ಅಥವಾ ಈ 4 ಜನ ಅಧಿಕಾರಿಗಳಲ್ಲಿ ಯಾರಾದರೊಬ್ಬರು ಬಂದರೆ, ಅವರಿಗೆ ಮನವಿ ಕೊಡುತ್ತೇವೆಂದು ಹೇಳಿದೆವು, ಆದರೆ ಅವರು ಯಾರೂ ಬರಲಿಲ್ಲ. ಅನಂತರ, ಅನಿವಾರ್ಯವಾಗಿ ನಮ್ಮ ಪ್ರತಿಭಟನೆ ಈ ರಾಜ್ಯ ಸರ್ಕಾರದ ವೈಫಲ್ಯಕ್ಕೆ ಅದೂ ಒಂದು ಕಾರಣ. ಅದಕ್ಕಿಂತ ಮುಂಚೆ ಒಂದು ವಾರ ಬೇರೆ ಬೇರೆ ಹಂತದಲ್ಲಿ ರಜೆ ಇತ್ತು. ಮರು ದಿವಸ 14ನೇ ತಾರೀಖು ಕೂಡ ರಜೆ ಇತ್ತು. ಆ ಒಂದು ದಿವಸದ ಕಛೇರಿಯ ಕೆಲಸದಲ್ಲೂ ಕೂಡ ಅಧಿಕಾರಿಗಳು ಸಾಮಾನ್ಯ ಜನರಿಗೆ ಅಥವಾ ಜನಪ್ರತಿನಿಧಿಗಳಿಗೆ ಸಿಗುವುದಿಲ್ಲವೆಂದು ಹೇಳಿದರೆ, ಅದಕ್ಕೆ ಏನು ಅರ್ಥ? ಸೋಮವಾರದ ದಿವಸ ಅಧಿಕಾರಿಗಳು ಕಡ್ಡಾಯವಾಗಿ ಕಚೇರಿಯಲ್ಲಿರಬೇಕು. ಜವಾಬ್ದಾರಿಯುತ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಯಾವುದೇ ಅಧಿಕಾರಿಗಳು ಇಲ್ಲದಿದ್ದರೆ, ಅದರ ಪ್ರತಿಭಟನಾರ್ಥವಾಗಿ, ಈ ರಾಜ್ಯ ಸರ್ಕಾರದ ವೈಫಲ್ಯತೆಗಾಗಿ ಮನವಿಯನ್ನು ನಾವು ಗೋಡೆಗೆ ಅಂಟಿಸಿದೆವು. ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೂ ಕೂಡ ಇಲ್ಲಿಯೇ ಕುಳಿತುಕೊಂಡಿದ್ದಾರೆ. ಸುಮಾರು 3 ತಿಂಗಳ ಜಿಲ್ಲಾ ಪಂಚಾಯತ್

ಸಭೆಯಲ್ಲಿ, ಅವರು ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಮತ್ತು ಉಡುಪಿ ಜಿಲ್ಲಾಧಿಕಾರಿಯವರೂ ಅವರೇ. ಉಡುಪಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೂಡ ಅವರೇ ಇದ್ದಾರೆ. ಎಲ್ಲಾ ಪೋಸ್ಟ್‌ಗಳೂ ಅವರ ಕೈಲೆ ಇದ್ದಾವೆ. ಇವು ಬೇರೆ ಯಾರಿಗೂ ಲಭ್ಯ ಇಲ್ಲ. ಮಾನ್ಯ ಜಿಲ್ಲಾಧಿಕಾರಿಗಳ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ.....

ಉಪಾಧ್ಯಕ್ಷರು : ಈಗ ತಾವು ಪ್ರಸ್ತಾಪ ಮಾಡಿಬಿಟ್ಟಿರಿ, ಸರ್ಕಾರದಿಂದ ಉತ್ತರ ಹೇಳಲಿ. ಆಮೇಲೆ ನೀವು ಪ್ರಶ್ನೆ ಕೇಳಿರಿ. ನಿಮ್ಮ ಪಕ್ಷದ ಮುಖಂಡರು ಪ್ರಸ್ತಾಪ ಮಾಡಿದ್ದಾರೆ. ತಾವೂ ಕೂಡ ಸಂಕ್ಷಿಪ್ತವಾಗಿ ಹೇಳಿದಿರಿ. ಈಗ ಸರ್ಕಾರದಿಂದ ಉತ್ತರ ಹೇಳಲಿ. ಮತ್ತೆ ನಿಮಗೆ ಏನಾದರೂ ಬೇಕಾದರೆ ಕ್ಲಾರಿಫಿಕೇಷನ್ ಕೇಳಿರಿ. ಇಲ್ಲಿ ಸುಮ್ಮನೆ 2-2 ತಾಸು ಭಾಷಣ ಮಾಡಿಕೊಂಡು ಹೋದರೆ ಹೇಗೆ? ಪ್ರಿಲಿಮಿನರಿ ಸಬ್‌ಮಿಷನ್‌ಗೆ ತಾವು ಹೇಳುತ್ತಾ ಇದ್ದೀರಿ, ಅಷ್ಟೇ ಹೇಳಬೇಕು. ಸಂಕ್ಷಿಪ್ತವಾಗಿ ಹೇಳಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅವರು ಹಿಂದೆ ಏನು ಮಾಡಿದ್ದರು ಎಂಬುದನ್ನೂ ಹೇಳಬೇಕಲ್ಲ.....

ಉಪಾಧ್ಯಕ್ಷರು : ನೀವು ವಕೀಲರಾದವರು, ಅವರಿಗೆ ಹೇಳಬೇಕು.

ಶ್ರೀ ಕೆ. ಜಯರಾಮಶೆಟ್ಟಿ : ವಿಚಾರಗಳನ್ನು ನಾವು ಸ್ಪಷ್ಟವಾಗಿ ವಿಧಾನ ಸಭೆಯ ಮುಂದೆ ಮಂಡಿಸಬೇಕೇ ಬೇಡವೇ?

ಉಪಾಧ್ಯಕ್ಷರು : ಮಂಡಿಸಬೇಕಾದರೆ ಗಂಟೆ ಗಟ್ಟಲೆ ಮಾತನಾಡುವುದು ಅಲ್ಲ. ತಾವು ಏನಾದರೂ ಹೇಳುವುದು ಇದ್ದರೆ ಸಂಕ್ಷಿಪ್ತವಾಗಿ ಹೇಳಬೇಕು. ತಾವು ಈಗ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ ತಮ್ಮ ಮುಖಂಡರು ಹೇಳಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಕುಂಬ್ಳೆ ಸುಂದರರಾವ್ : ಆ ವ್ಯಕ್ತಿ ನಮ್ಮ ಜಿಲ್ಲೆಗೆ ಸರಿಸಾರಿಯಾದ ವ್ಯಕ್ತಿಯಲ್ಲ.

ಉಪಾಧ್ಯಕ್ಷರು : ಈಗ ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ್ದಾರೆ. ನಿಮ್ಮ ಪರವಾಗಿ ಅವರು ಮಾತನಾಡಿದ್ದಾರೆ. ನಿಮ್ಮ ಮುಖಂಡರು ಹೇಳಿದ್ದಾರೆ. ತಾವು ಸಂಕ್ಷಿಪ್ತವಾಗಿ ಮುಗಿಸಿ.

ಶ್ರೀ ಕೆ. ಜಯರಾಮಶೆಟ್ಟಿ : ಮಾನ್ಯ ಅಧ್ಯಕ್ಷರೇ, ಶಾಸಕರ ಮತ್ತು ಜಿಲ್ಲಾ ಪಂಚಾಯತ್ ಸದಸ್ಯರ ಸಭೆಯಲ್ಲಿ ಏನಾದರೂ ಒಂದು ವಿಷಯವನ್ನು ಪ್ರಸ್ತಾಪ ಮಾಡಿದಾಗ ಜಿಲ್ಲಾಧಿಕಾರಿಗಳು ಎದ್ದು ಹೊರಟು ಹೋಗಿದ್ದಾರೆ.

ಉಪಾಧ್ಯಕ್ಷರು : ಬೇರೆ ಏನಾದರೂ ಇದ್ದರೆ ಹೇಳಿ. ಹೇಳಿದ್ದನ್ನೇ ಹೇಳಿದರೆ ಹೇಗೆ?

ಶ್ರೀ ಕೆ. ಜಯರಾಮಶೆಟ್ಟಿ : ಜನಪ್ರತಿನಿಧಿಗಳಿಗೆ ಗೌರವ ಕೊಡುವವರು ಅಲ್ಲ ಅವರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ನಾನು ಅತ್ಯಂತ ಗೌರವ ಕೊಟ್ಟು ತಮ್ಮ ಪೀಠಕ್ಕೆ ಒಂದು ಮಾತನ್ನು ಹೇಳುತ್ತೇನೆ. ಇದನ್ನು ನಾವು ಮೊದಲನೇ ದಿವಸವೇ ಪ್ರಸ್ತಾಪ ಮಾಡಬೇಕು

ಎಂದು ಇದ್ದೆವು. ಬಹಳ ಪ್ರಮುಖವಾದ ರಾಜ್ಯದ ಜ್ವಲಂತ ಸಮಸ್ಯೆ ಇದ್ದಾಗ ಶಾಸಕರಿಗೂ ಅಪಮಾನವಾದರೂ ಪರವಾಗಿಲ್ಲ ಎಂದು ನಾವು ಇವತ್ತಿನವರೆಗೂ ಕಾದಿದ್ದೇವೆ. ಒಂದು ಗಂಟೆ ಅಲ್ಲ ಎರಡು ದಿವಸ ಆದರೂ ಚರ್ಚೆ ಮಾಡುವಂತಹ ವಿಷಯವಿದು. ನಾನು ಇವತ್ತು ನಿಮ್ಮನ್ನೇ ಕೇಳುತ್ತೇನೆ. ಇಲ್ಲಿರತಕ್ಕಂಥ ಯಾವುದಾದರೂ ಶಾಸಕರ ವಿವರವನ್ನು ತಾವು ನೋಡಿ. ಒಂದು ನಿಮಿಷ. ನಮ್ಮ ಶಾಸಕರು ಅಗೌರವವಾಗಿ ನಡೆದುಕೊಂಡಿದ್ದಾರೆ ಹೇಳಿ, ಜಿಲ್ಲಾಧಿಕಾರಿಗಳು ಕಾರಿನಲ್ಲಿ ನೋಡಿಯೂ ಹೋದರು. ಏಕೆಂದರೆ 13ನೇ ತಾರೀಖು ಇಡೀ ರಾಜ್ಯದಲ್ಲಿ ಸತ್ಯಾಗ್ರಹ ನಡೆಯುತ್ತಿದೆ. ಎಲ್ಲಿಯಾದರೂ ಅಹಿತಕರವಾದ ಘಟನೆ ನಡೆದಿದೆಯೇ ಒಂದು 200 ಜನ ಕುಳಿತಿದ್ದರು ಒಂದು 10 ಜನ ಮನವಿ ಕೊಡುವುದಕ್ಕೆ ಒಳಗೆ ಹೋದರು. ಸನ್ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ದೇವೇಗೌಡರು ಬಂದಿದ್ದರು ಎಂದು ಹೇಳಿ ಜಿಲ್ಲಾಧಿಕಾರಿಗಳು ಹೊರಗೆ ಹೋದರು. ನಾನು ಹೊರಗೆ ಹೋಗುತ್ತಿದ್ದೇನೆ ನಿಮ್ಮದು ಏನು ವಿಷಯ ಎಂದು ಕೇಳಬಹುದಾಗಿತ್ತು. ಅವರು ಮಾತನಾಡುವುದುಬೇಡ. ವ್ಯವಸ್ಥೆ ಮಾಡಿದ್ದೇನೆ ಮನವಿಯನ್ನು ಕೊಡುವುದಕ್ಕೆ ಎಂದು ಹೇಳಿ ಆದರೂ ಹೋಗಬಹುದಿತ್ತು. ಅಲ್ಲಿ ಎ.ಸಿ. ಇರಲಿಲ್ಲ. ಹೆಡ್‌ಕ್ವಾರ್ಟಸ್ ಅಸಿಸ್ಟೆಂಟ್ ಇರಲಿಲ್ಲ. ಆಗ ನಮ್ಮ ಶಾಸಕರು ಏನು ಹೇಳಿದರು ಜಿಲ್ಲಾಧಿಕಾರಿಗಳೇ ಬರಲಿ ಅವರಿಗೆ ನಾವು ಮನವಿಯನ್ನು ಕೊಡಬೇಕೆಂದು ಹೇಳಿದರು. ಆಗ ಅವರನ್ನು ಫೋನ್‌ನಲ್ಲಿ ಸಂಪರ್ಕಿಸಿದಾಗ ನಾನು ಯಾರೋ ದೊಡ್ಡವರ ಜೊತೆಯಲ್ಲಿ ಇದ್ದೇನೆ ನಾನು 4 ಗಂಟೆಯವರೆಗೂ ಬರುವುದಕ್ಕಾಗುವುದಿಲ್ಲ ಎಂದು ಹೇಳಿದರು; ಕೊನೆಗೆ ಅಲ್ಲಿರತಕ್ಕಂಥ ಒಂದು ಕಂಬಕ್ಕೆ ಅವರ ಮನವಿಯನ್ನು ಅಂಟಿಸಿ ಬಂದರು. ಇದು ಅಪರಾಧವೇ? ಇವರ ಮೇಲೆ ಒಂದು ಕೇಸ್ ಹಾಕುತ್ತೀರಾ ?3 ಜನ ಎಂ.ಎಲ್.ಎ.ಗಳ ಮೇಲೆ ಅಲ್ಲಿರತಕ್ಕಂಥ ನಮ್ಮ ಪಕ್ಷದ ಜಿಲ್ಲಾ ಅಧ್ಯಕ್ಷರ ಮೇಲೆ, ಕಾರ್ಪೊರೇಷನ್ ವಿರೋಧ ಪಕ್ಷದ ನಾಯಕರ ಮೇಲೆ ಇವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಪತ್ರಿಕೆಗಳಲ್ಲಿ ಬರುತ್ತದೆ ಎಂದು ಹೇಳುವುದಾದರೆ ನಾವು ಇಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವೇ ಸ್ವಾಮಿ ?

ಉಪಾಧ್ಯಕ್ಷರು : ನಾನು ಹೇಳುವುದು ಅವರಿಗೆ ನಾನು ಅಡ್ಡಿಪಡಿಸಬೇಕೆನ್ನುವ ಇಚ್ಛೆಇಲ್ಲ. ಇಲ್ಲಿ ಇರುವ ಪ್ರಶ್ನೆ ಏನೆಂದರೆ ಸರ್ಕಾರದ ಪರವಾಗಿ ಅವರು ಉತ್ತರ ಹೇಳಲಿ.

ಶ್ರೀ ಎಂ.ಪಿ. ಪ್ರಕಾಶ್ : ಸಮಯ ನಿಗಧಿತವಾಗಿ ಇರುವುದರಿಂದ ಸಂಬಂಧಪಟ್ಟವರು ಎಲ್ಲರೂ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟರೆ ಸಮಯದ ತೊಂದರೆ ಇದೆ ಎಂದು ಹೇಳಿ ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಾಗಿದೆ. ಈಗ ಅವರು ಅವರ ಎಲ್ಲಾ ಹಳೆಯ ಕಥೆಗಳನ್ನು ಹೇಳುತ್ತಾ ಕುಳಿತರೆ ಹೇಗೆ ಆಗುತ್ತದೆ.

ಶ್ರೀ ಕೆ. ಜಯರಾಮಶೆಟ್ಟಿ : ನಾವು ಇನ್ನು ಮುಂದೆಯು ಸಹ ಸಾಮಾನ್ಯ ಜನರ ಅಹವಾಲುಗಳನ್ನು ತೆಗೆದುಕೊಂಡು ಜಿಲ್ಲಾಧಿಕಾರಿಗಳ ಕಛೇರಿಗೆ ಹೋಗುವುದಕ್ಕೆ ಇರುತ್ತದೆ. ಇದೇ ರೀತಿ ಮುಂದುವರೆದರೆ ನಾವು ಹೇಗೆ ಕೆಲಸ ಮಾಡುವುದಕ್ಕೆ ಆಗುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ ಆ ಜಿಲ್ಲಾಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಈಗ ಹಾಕಿರುವ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಾನು ಮುಂದೆ ಕೆಲಸ ಮಾಡುವುದಕ್ಕೆ ಸಾಧ್ಯ ಇಲ್ಲ. ಅವರನ್ನು ಸಸ್ಪೆಂಡ್ ಮಾಡಬೇಕು ಮತ್ತು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

+ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ ನಾವು ಶಾಂತವಾಗಿ ಮನವಿಯನ್ನು ಕೊಡುವುದಕ್ಕೆ ಹೋದಾಗ ಯಾರೂ ನಮ್ಮನ್ನು ತಡೆಯಲಿಲ್ಲ. ಓಪನ್ ಆಗಿ ಇತ್ತು. ನಾವು ಡಿ.ಸಿ. ಕೊಠಡಿಯಲ್ಲಿ ಹೋಗಿ ಕುಳಿತುಕೊಂಡು ನಾವು ಮನವಿ ಮಾಡಿದ್ದು ಡಿ.ಸಿ.ಯವರು ಎಲ್ಲಿದ್ದಾರೆ? 3 ಗಂಟೆಯ ನಂತರ ಸಿಗಬಹುದು ಅವರು ಬೇರೆ ಕಡೆ ಹೋಗಿದ್ದಾರೆಂದು ಹೇಳಿದರು. ಫೋನ್ ಮುಖಾಂತರ ಸಂಪರ್ಕ ಮಾಡಬಹುದಾ? ಎಂದು ಕೇಳಿದೆವು. ಅಷ್ಟು ಬಿಟ್ಟರೆ ಬೇರೆ ಏನನ್ನೂ ನಾವು ಕೇಳುವುದಕ್ಕೆ ಹೋಗಲಿಲ್ಲ. ಅದರ ನಂತರ ನಮ್ಮ ಜೊತೆಯಲ್ಲಿ ಪೋಲೀಸ್ ಅಧಿಕಾರಿಗಳು ನಿಂತುಕೊಂಡಿದ್ದರು ನಾವು ಅಲ್ಲಿ ಕುಳಿತುಕೊಂಡಿದ್ದೆವು. ಆದರೆ ಇದು ಅಕ್ರಮ ಪ್ರವೇಶ ಎನ್ನುವುದು ಹೇಗೆ ಆಗುತ್ತದೆ? ಎರಡನೆಯದು ಇವರ ಎಫ್.ಐ.ಆರ್ ಅನ್ನು ಅದೇ ದಿವಸ ಸಲ್ಲಿಸಿದ್ದಾರೆ. ಈಗ ನಾವು ಏನು ಹೇಳಿದ್ದೇವೆ ಇಷ್ಟು ಸಂಗತಿಗಳು ಮಾತ್ರ ಅದರಲ್ಲಿ ಉಲ್ಲೇಖ ಆಗಿತ್ತು. ಆದರೆ 15ನೇ ತಾರೀಖು ಎರಡನೇ ಎಫ್.ಐ.ಆರ್‌ಅನ್ನು ಅಡಿಶನಲ್ ಮ್ಯಾಜಿಸ್ಟ್ರೇಟರ್ ಮುಂದೆ ಸಲ್ಲಿಸಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆ ಅಂದರೆ ಈ ಎಲ್ಲಾ ಸೆಕ್ಷನ್ಸ್‌ಗಳನ್ನು ಹಾಕಿ ನಮ್ಮ ಸರ್ಕಾರಿ ನೌಕರರು ತಮ್ಮ ಸೇವೆಯನ್ನು ಮಾಡುವುದಕ್ಕೆ ತಡೆಯೊಡ್ಡುವ ಎಲ್ಲಾ ಸೆಕ್ಷನ್‌ಗಳನ್ನು ನಿಯಮಗಳನ್ನು ಅದರಲ್ಲಿ ಹಾಕಿದಾಗ ಅದು ನಮ್ಮ ಮೇಲೆ ಒಂದು ರಿವೇಂಜ್ ತೋರಿಸುವ ರೀತಿಯಲ್ಲಿ ಮಾಡಿದ್ದಾರೆ. ಇನ್ನೊಂದು ಮುಖ್ಯವಾದ ಅಂಶ ಅಂದರೆ ಇದೇ ಜಿಲ್ಲಾಧಿಕಾರಿ ವಿರುದ್ಧ ಮಂಗಳೂರು ಮೇಯರ್ ಅವರ ಜೊತೆ ಸಾಕಷ್ಟು ದೊಡ್ಡ ಚರ್ಚೆಗಳು ಆಗಿ ದೊಡ್ಡ ಸಭೆ ನಡೆಯಬೇಕು ಎಂದು ಹೇಳುವಂತಹ ಸಂದರ್ಭದಲ್ಲಿ ಶಾಂತಿಪಡಿಸಿದಂತಹ ವ್ಯಕ್ತಿ ನಾನು. ಒಂದು ರೀತಿಯಲ್ಲಿ ಇವೆಲ್ಲವನ್ನೂ ನಾವು ಸ್ವಾಂತನಗೊಳಿಸಬೇಕು. ಎಲ್ಲವನ್ನೂ ಸೌಹಾರ್ದಯುತವಾಗಿ ಬಗೆಹರಿಸಬೇಕೆಂದು ಹೇಳಿದಂತಹ ವ್ಯಕ್ತಿ ನಾನು. ಅಷ್ಟು ಮಾತ್ರ ಅಲ್ಲ ಈ ಸಂದರ್ಭದಲ್ಲಿ ಸನ್ಮಾನ್ಯ ಉಸ್ತುವರಿ ಸಚಿವರು ಬಂದಾಗ ಅವರ ಜೊತೆಯಲ್ಲಿ ಸಹ ಹೇಳಿ ಯಾವುದೇ ಕಾರಣಕ್ಕೂ ಅಧಿಕಾರಿಗಳು ಮತ್ತು ಶಾಸಕರು ಸಂಘರ್ಷಣೆ ಮಾಡಿಕೊಳ್ಳುವುದು ಸರಿಯಲ್ಲ, ನಾವು ಎಲ್ಲಾ ಸಂದರ್ಭಗಳಲ್ಲಿಯೂ ನಮ್ಮ ಸಹಕಾರವನ್ನು ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಷ್ಟೆಲ್ಲಾ ಆದನಂತರವೂ ಸಹ ಈ ರೀತಿ ಆಗಿದೆ ಎಂದು ಹೇಳಿದರೆ ಇದು ಎಷ್ಟೊಂದು ಉದ್ದಟತನ ಎಂದು ನಾನು ಹೇಳುತ್ತಿದ್ದೇನೆ. ಮೊನ್ನೆ ಸಹ ಈ ಸಭೆಯಲ್ಲಿ ಒಂದು ವಿಷಯ ಪ್ರಸ್ತಾಪವಾಯಿತು. ನಮ್ಮ ಆಡಳಿತ ಪಕ್ಷದ ಮುಖ್ಯ ಸಚೇತಕರಾದ ವಸಂತ ಬಂಗೇರ ಅವರ ಕ್ಷೇತ್ರದಲ್ಲಿ ಸುಂಟರಗಾಳಿ ಬಂದಾಗ ಆ ಸಂದರ್ಭದಲ್ಲಿ ಆದ ಚರ್ಚೆಯನ್ನು ನಾನು ಸೂಕ್ಷ್ಮವಾಗಿ ಗಮನಿಸುತ್ತಿದ್ದೆ. ಜಿಲ್ಲಾಧಿಕಾರಿಗಳು ಆ ಕ್ಷೇತ್ರಕ್ಕೆ ಹೋಗಲೇ ಇಲ್ಲ. ಸುಂಟರಗಾಳಿ ಬಂದು 8-10 ದಿವಸಗಳು ಆಗಿದೆ ಅಷ್ಟು ಕೋಟಿ ರೂಪಾಯಿಗಳ ನಷ್ಟವಾಗಿದೆ ಅಲ್ಲಿ ಸಮಸ್ಯೆಗಳು ಬಂದಾಗ ಸಹ ಅವರು ಅಲ್ಲಿಗೆ ಹೋಗಲಿಲ್ಲ. ಇಂತಹ ಅನೇಕ ಉಲ್ಲೇಖಗಳನ್ನು ನಾನು ಕೊಡಬಹುದು. ಡಾಕ್ಟರ್ ಅಂಬೇಡ್ಕರ್ ಜಯಂತಿ ದಿವಸ ಅನೇಕ ದಲಿತ ನಾಯಕರು ಇದ್ದಾರೆ. ಮಾಜಿ ಉಪ ಮೇಯರ್ ಅವರು ಮೇಯರ್‌ಗಳು ಅವರೇ ಸ್ವತಃ ನಿಂತು ಹೇಳಿದರು, ದಲಿತ ನಾಯಕರ ಪ್ರಮುಖವಾದ ಕಾರ್ಯ ಕ್ರಮ ನಡೆಯುವಾಗಲೂ ಸಹ ಯಾವುದೇ ದಲಿತನಾಯಕರನ್ನು ಸಂಪರ್ಕ ಮಾಡದೇ ತಾವು ಈ ಕಾರ್ಯಕ್ರಮ ಮಾಡಿದ್ದು ಸರಿಯಲ್ಲ ಎಂದು ಅವರು ಹೇಳಿದರು. ಈ ವಿಷಯಗಳನ್ನು ನಾನು ಉಲ್ಲೇಖ ಮಾಡುತ್ತಾ ಅವರು ನಮಗೆ ಅವಮಾನ

ಮಾಡಬೇಕೆನ್ನುವ ಉದ್ದೇಶದಿಂದಲೇ ಅವರು ಈ ರೀತಿ ಮಾಡಿದ್ದಾರೆ. ಅವರನ್ನು ಅಲ್ಲಿಂದ ತೆಗೆಯಬೇಕು ಮತ್ತು ಅವರನ್ನು ಸಸ್ಪೆಂಡ್ ಮಾಡಬೇಕು ಮತ್ತು ಅವರ ಮೇಲೆ ಕ್ರಮವನ್ನು ಸಹ ತೆಗೆದುಕೊಳ್ಳಬೇಕೆಂದು ಹೇಳುತ್ತಾ ಮತ್ತು ನಮ್ಮ ಮೇಲೆ ಹಾಕಿರುವ ಮೊಕದ್ದಮೆಗಳನ್ನು ವಾಪಸ್ಸು ತೆಗದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

+ಶ್ರೀ ಕುಂಬ್ಳೆ ಸುಂದರ್ ರಾವ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಜಿಲ್ಲಾಧಿಕಾರಿಯವರನ್ನು ನಾನು 12ನೇ ತಾರೀಖು ದಿವಸ ಸಂಪರ್ಕ ಮಾಡಿದ್ದೇ ಬೇರೊಂದು ಕಾರಣಕ್ಕಾಗಿ. ಆಗ ಅವರು ನೀವು ಮುಖತಃ ಬನ್ನಿ ಎಂದು ಹೇಳಿದ್ದಕ್ಕೆ ನಾನು ಆಗ ಹೇಳಿದೆ 13ನೇ ತಾರೀಖು ನಮ್ಮದು ಪ್ರತಿಭಟನೆ ಇದೆ ಆಗ ಮನವಿ ಕೊಡಲಿಕ್ಕೆ ನಿಮ್ಮಲ್ಲಿ ಬರುತ್ತೇನೆ ಆಗ ನಾವು ಮಾತನಾಡೋಣ ಎಂದು. ನಾನು ಏಕೆ ಇದನ್ನು ಈಗ ಪ್ರಸ್ತಾಪ ಮಾಡುತ್ತಿದ್ದೇನೆ ಅಂದರೆ ನನಗೆ ಅವರು ಕುಳಿತುಕೊಳ್ಳುವುದೇ ಗೊತ್ತಿರಲಿಲ್ಲ. ಆ ಪ್ರಕರಣವೇ ನನಗೆ ಗೊತ್ತಿರಲಿಲ್ಲ. ನಾನು ನೋಡುತ್ತಾ ಹೋದೆ ಎಂದು ಏನು ಅವರು ಹಾರಿಕೆ ಉತ್ತರವನ್ನು ಕೊಡುತ್ತಿದ್ದಾರೆ ಅದಕ್ಕೆ ಸಂಬಂಧಪಟ್ಟ ಹಾಗೆ ನಾನು ಹೇಳುತ್ತಿದ್ದೇನೆ. ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಆ ಕ್ಷೇತ್ರಕ್ಕೆ ಸಂಬಂಧಪಟ್ಟವರು ಕುಳಿತುಕೊಂಡಿರುವಾಗ ಒಮ್ಮೆ ವಾಹನ ನಿಲ್ಲಿಸಿ ಮರ್ಯಾದೆಗೋಸ್ಕರವಾದರೂ ಏನಪ್ಪ ನಿಮ್ಮ ಮನವಿ ಎಂದು ಕೇಳಬಹುದಾಗಿತ್ತು. ಇಲ್ಲಾ ಅಂದರೆ ಅಲ್ಲಿ ನೀವು ಮನವಿ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇನೆಂದು ಹೇಳಬಹುದಿತ್ತು, ಆ ಕೆಲಸವನ್ನು ಅವರು ಏಕೆ ಮಾಡಲಿಲ್ಲ ಅಂದ್ರೆ ನಮ್ಮ ಬಗ್ಗೆ ಅವರಿಗೆ ತಿರಸ್ಕಾರ. ಶಾಸಕರ ಬಗ್ಗೆ ಅವರಿಗೆ ಯಾವುದೇ ಗೌರವ ಇಲ್ಲ ಎಂದು ಆಯಿತು. ನಾವು ಏನು ಗ್ರಹಿಸಿದೆವು ಅಂದ್ರೆ ಇವರು ಹೋಗುವಾಗ ನಮ್ಮನ್ನು ಗಮನಿಸಿದ್ದಾರೆ ಹೋಗುವ ಮೊದಲೇ ಪೋಲೀಸಿನವರಿಂದ ಇವರಿಗೆ ವಿಷಯ ಗೊತ್ತಿದೆ ಮುನ್ನಾ ದಿನ ನಾನು ತಿಳಿಸಿದ್ದೇನೆ ಅದ್ದರಿಂದ ಮನವಿ ಸ್ವೀಕಾರ ಮಾಡುವುದಕ್ಕೆ ವ್ಯವಸ್ಥೆ ಮಾಡಿರುತ್ತಾರೆ ಎಂದು. ಅಲ್ಲಿ ವ್ಯವಸ್ಥೆಯೇ ಬೇರೆ ಆಗಿದೆ. ಅಲ್ಲಿ ಉಪ ಆಯುಕ್ತರು ಇಲ್ಲ. ಹೆಡ್‌ಕ್ವಾರ್ಟಸ್ ಅಸಿಸ್ಟೆಂಟ್ ಇಲ್ಲ. ತಹಶೀಲ್ದಾರ್ ಇಲ್ಲ. ನಾವು ಏನು ಮಾಡಬೇಕು. ಒಬ್ಬ ಜಿಲ್ಲಾಧಿಕಾರಿ ಕಛೇರಿಗೆ ಶಾಸಕರು ಹೋಗುವುದು ಅಕ್ರಮವಾಗುತ್ತದೆ ಏನು? ಅದು ಟ್ರೆಸ್‌ಪಾಸ್ ಆಗುತ್ತದೆ ಏನು? ಇದು ನನಗೆ ಅರ್ಥವಾಗುವುದಿಲ್ಲ. ಯಾವುದೇ ಸಭೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದರೆ ಶಾಸಕರು ಹೋಗಬಹುದು ಎಂದು ಇದೆ. ಯಾವುದೇ ಕಾರ್ಯಕ್ರಮ ನಡೆದರೂ ಶಾಸಕರನ್ನು ಕರೆದು ಗೌರವ ಕೊಡುವುದು ಜಿಲ್ಲಾಧಿಕಾರಿಗಳ ಕರ್ತವ್ಯ ಇದೆ. ಅವರು ಇಲ್ಲ ಎನ್ನುವ ಕಾರಣಕ್ಕಾಗಿ ನಾವು ಅಲ್ಲಿಗೆ ಹೋಗದೇ ಇರುವುದಕ್ಕೆ ಆಗುವುದಿಲ್ಲ. ನಾವು ಅಲ್ಲಿ ಯಾವುದೇ ಆಸನ ಹಾಳು ಮಾಡಲಿಲ್ಲ. ಅಥವಾ ಇನ್ನಾವುದೇ ಅಕ್ರಮ ಕೆಲಸ ಮಾಡಲಿಲ್ಲ. ಯಾರೂ ಅಲ್ಲಿ ಗಲಾಟೆ ಮಾಡಲಿಲ್ಲ. ಘೋಷಣೆ ಕೂಗಲಿಲ್ಲ. 3 ಜನ ಶಾಸಕರು ಸಭ್ಯತೆಯಿಂದ ವರ್ತನೆ ಮಾಡಿದ್ದೇವೆ. ನಮ್ಮ ಮೇಲೆ ಇಷ್ಟೆಲ್ಲಾ ಸೆಕ್ಷನ್‌ಗಳನ್ನು ಹಾಕುತ್ತಾರೆ ಎಂದು ಆದರೆ ನಾವು ಯಾವ ಸೆಕ್ಷನ್‌ಗೆ ಸೇರಿದವರು ಎಂದು ನಮಗೆ ಅರ್ಥವಾಗುತ್ತಿಲ್ಲ. ನಾವು ಶಾಸಕರೋ ಅಥವಾ ಜನಸಾಮಾನ್ಯರೋ. ನಮಗೆ ಇಷ್ಟು ಮಾತ್ರ ಬೇಕಾಗಿದೆ. ನಮಗೆ ಅವಮಾನ ಆಗಿದೆ ನಮ್ಮ ಮೇಲೆ ಕೇಸ್ ಹಾಕಿದ್ದಾರೆ. ಈ ಕೇಸ್ ಹಾಕಿರುವ ಪರಿಣಾಮವಾಗಿ ಒಂದೊಂದು ಸೆಕ್ಷನ್‌ಗೂ ಎಷ್ಟೆಷ್ಟು ವರ್ಷ ಶಿಕ್ಷೆಯಾಗುತ್ತದೆಂದು ಲೆಕ್ಕಾ ಮಾಡಿದರೆ ಶಾಸನ ಸಭೆಯಲ್ಲಿ ಒಂದೂವರೆ

ವರ್ಷ ಜೈಲಿನಲ್ಲಿ ಎಷ್ಟು ವರ್ಷ ಕುಳಿತುಕೊಳ್ಳಬೇಕು ನಾವು. ಯಾರು ಇದಕ್ಕೆ ಕಾರಣ ಯಾವ ತಪ್ಪಿಗೆ ನಮಗೆ ಈ ಶಿಕ್ಷೆ. ನಾವು ಮೂರು ಜನ ಶಾಸಕರು ಈ ಸದನದ ಸದಸ್ಯರು ಎಲ್ಲಾ ಸದಸ್ಯರಿಗೂ ಸಮಾನವಾಗಿ ಅನ್ವಯವಾಗುವಂತಹ ಪ್ರಶ್ನೆ ಇದು. ಇಂತಹ ಒಬ್ಬ ಅಧಿಕಾರಿ ಸದನದ ಸದಸ್ಯರಿಗೆ ಅಪಮಾನ ಮಾಡಿದ್ದನ್ನು ನೀವೆಲ್ಲ ನಿಮ್ಮ ಸ್ವಂತದ ಅಪಮಾನ ಎಂದು ಗ್ರಹಿಸುತ್ತೇನೆ. ಆದ್ದರಿಂದ ಆ ಜಿಲ್ಲಾಧಿಕಾರಿಯನ್ನು ಸಸ್ಪಂಡ್ ಮಾಡಿ ವಿಚಾರಣೆಗೆ ಗುರಿ ಮಾಡಿ ನಮ್ಮ ಕೇಸನ್ನು ಹಿಂದಕ್ಕೆ ತೆಗೆದುಕೊಳ್ಳಿ ಎಂದು ನಾನು ಒತ್ತಾಯ ಮಾಡುತ್ತೇನೆ.

+ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಎಲ್ಲಾ ವಿಚಾರಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಶಾಸಕರಿಗೆ ಅಪಮಾನ ಮಾಡಿದಂತಹ ವಿಚಾರವನ್ನು ನಾವು ಯಾರೂ ಒಪ್ಪುವುದಿಲ್ಲ ಮತ್ತು ಈ ಸದನ ಅದನ್ನು ಖಂಡಿಸುತ್ತದೆ. ಅವತ್ತು ವಸ್ತುಸ್ಥಿತಿ ಏನಾಗಿದೆ ಎನ್ನುವಂತಹ ವಿಷಯವನ್ನು ನಾನು ಹೇಳುತ್ತೇನೆ. 13ನೇ ತಾರೀಖು ಹಿಂದಿನ ಪ್ರಧಾನ ಮಂತ್ರಿಗಳಾದ ಮಾನ್ಯ ದೇವೇಗೌಡರು ಕಟೀಲು ಪವಿತ್ರ ಕ್ಷೇತ್ರಕ್ಕೆ ಅವರು ಸಂದರ್ಶನ ಕೊಡತಕ್ಕಂಥ ಸಂದರ್ಭದಲ್ಲಿ ಶಿಷ್ಟಾಚಾರ ಸಂಹಿತೆ ಪ್ರಕಾರವಾಗಿ ಜಿಲ್ಲಾಧಿಕಾರಿಗಳು ಆ ದಿವಸ ಅವರ ಜೊತೆಗೆ ತೆರಳಿದ್ದಾರೆ. ಆ ಸನ್ನಿವೇಶ ಇದ್ದುದರಿಂದ ಪ್ರಭಾರಿಯಾದ ಒಬ್ಬ ಕಛೇರಿ ಸಹಾಯಕನನ್ನು ಅವತ್ತು ಅಲ್ಲಿ ಇಟ್ಟಿದ್ದಾರೆ. ಹೆಡ್‌ಕ್ವಾರ್ಟಸ್ ಅಸಿಸ್ಟೆಂಟ್ ಸಹ ಅವತ್ತು ಅಲ್ಲಿ ಇಲ್ಲ. ಇದಾದ ನಂತರ ಅಲ್ಲಿ ಇರತಕ್ಕಂಥ ಶಾಸಕ ಮಿತ್ರರು ಮತ್ತು ಎಲ್ಲಾ ಮನವಿದಾರರು ಜಿಲ್ಲಾಧಿಕಾರಿಗಳನ್ನು ಈ ಕೂಡಲೇ ಕರೆಸಬೇಕೆಂದು ಒತ್ತಾಯ ಮಾಡಿದ್ದಾರೆ. ಅವರು ಬೇರೆ ಒಂದು ಕಾರ್ಯಕ್ರಮದಲ್ಲಿ ಇದ್ದಾರೆ ಅದ್ದರಿಂದ ದಯವಿಟ್ಟು ತಮ್ಮ ಮನವಿಯನ್ನು ಕೊಡಿ ಎಂದು ಕೇಳಿದ್ದಾರೆ ಆಗ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಆಗ ಬೇರೆ ಯಾರಾದರೂ ಒಬ್ಬ ಅಧಿಕಾರಿಯನ್ನು ಕರೆಸಿ ಎಂದು ಹೇಳಿದ ತಕ್ಷಣವೇ ಮಂಗಳೂರು ತಹಶೀಲ್ದಾರ್ ಅವರನ್ನು ಮತ್ತು ಆಹಾರ ಆಯುಕ್ತರನ್ನು ಆ ಕೂಡಲೇ ಕರೆಸಿದ್ದಾರೆ. ಅವರು ಕೂಡ ಈ ವಿಚಾರದಲ್ಲಿ ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ದಯಮಾಡಿ ತಾವು ತಮ್ಮ ಮನವಿಯನ್ನು ಕೊಡಿ ಎಂದು. ಅವರು ಜಿಲ್ಲಾಧಿಕಾರಿಗಳು ಬಂದ ತಕ್ಷಣವೇ ಕೊಡುತ್ತೇನೆ ಎನ್ನುವಂತಹ ಮಾತನ್ನು ಸಹ ಹೇಳಿದ್ದಾರೆ. ಆಗ ಅವರು ಆ ಮನವಿಯನ್ನು ನಿಮ್ಮ ಕೈಯಲ್ಲಿ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿ ಅಲ್ಲಿರತಕ್ಕಂಥ ಕಂಬಕ್ಕೆ ಅಂಟಿಸಿ ಬಂದಿದ್ದಾರೆ. ಆದರೆ ಅದು ಏನೇ ವಿಚಾರಗಳು ಇರಲಿ ಅವರು ಅಕ್ರಮ ಪ್ರವೇಶ ಮಾಡಿದ್ದಾರೆ ಅದು ಇದು ಎನ್ನುವಂತಹ ರೀತಿಯಲ್ಲಿ ಏನು ಕ್ರಿಮಿನಲ್ ಕೇಸನ್ನು ದೂರನ್ನು ಕೊಟ್ಟಿದ್ದಾರೆ ಅದು ಸರಿಯಲ್ಲ. ಸರ್ಕಾರ ಖಂಡಿತವಾಗಿ ಅದನ್ನು ವಾಪಸ್ಸು ತೆಗೆದುಕೊಳ್ಳುತ್ತದೆ. ಅದರಲ್ಲಿ ಯಾವುದೇ ನಿಲುವು ಇಲ್ಲ. ಜನಗಳ ಪ್ರತಿನಿಧಿಗಳಾಗಿರುವಂತಹ ಕಾರಣದಿಂದ ಮತ್ತು ಅಲ್ಲಿ ಯಾವುದೇ ರೀತಿಯಾದಂತಹ ಅಸಂಭವನೀಯವಾದಂತಹ ಘಟನೆಗಳು ನಡೆಯದೇ ಇರುವಂತಹ ಕಾರಣದಿಂದ ನಾವು ಖಂಡಿತವಾಗಿಯೂ ಕೂಡ ಆ ಕೇಸನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆದೇಶ ಕೊಡುತ್ತೇವೆ.

5.50 ಪಿ.ಎಂ

ಉಳಿದಿರತಕ್ಕಂಥ ವಿಚಾರದಲ್ಲಿ ತಾವೇನು ಚರ್ಚೆ ಮಾಡಿದ್ದೀರಿ ಇದರ ಬಗ್ಗೆ ನಾವು ಡಿವಿಜನಲ್ ಕಮೀಷನರ್ ಹತ್ತಿರ ವರದಿಯನ್ನು ತರಿಸಿಕೊಂಡು, ಇವೊತ್ತೇ ಮುಖ್ಯಮಂತ್ರಿಯವರ ಜೊತೆಗೆ ಮಾತನಾಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಶಾಸಕರುಗಳು ಅಲ್ಲಿ ಧರಣಿ ಕುಳಿತಿರತಕ್ಕಂಥ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಅಲ್ಲಿಂದ ಹಾದು ಹೋಗಿದ್ದಾರೆ. ಅವರ ಎದುರುಗಡೆಯಿಂದಲೇ ಹೋಗಿದ್ದಾರೆ. ಧರಣಿ ಕುಳಿತಿರತಕ್ಕಂಥವರ ಜೊತೆಗೆ ಯಾವ ಪ್ರಸ್ತಾಪನ್ನಾಗಲೀ, ಯಾವ ಮಾತನ್ನಾಗಲೀ ಮಾಡಲು ಹೋಗಿಲ್ಲ. ಮೊದಲನೇ ದಿನವೇ ಮಾನ್ಯ ಕುಂಬ್ಳೆ ಸುಂದರರಾವ್‌ರವರು ನಾಳೆಯ ದಿನ ನಾವುಗಳು ಬರುತ್ತಾ ಇದ್ದೇವೆ ಎಂದು ಹೇಳಿ ಹೋಗಿದ್ದಾರೆ. ಈಗ ಸರಕಾರದವರು ಕೇಸನ್ನು ವಾಪಸ್ ತೆಗೆದುಕೊಳ್ಳುತ್ತಿರುವುದು ಸಂತೋಷ. ಈ ಧರಣಿ ಕಾರ್ಯಕ್ರಮವು ಇಡೀ ರಾಜ್ಯದಲ್ಲಿಯೇ ಅಂದು ನಡೆದಿದೆ. ಆದರೆ ಒಬ್ಬ ಜಿಲ್ಲಾಧಿಕಾರಿಯು ಈ ರೀತಿಯಾಗಿ ಶಾಸಕರುಗಳ ಜೊತೆಗೆ ನಡೆದುಕೊಳ್ಳುತ್ತಾರೆ ಅಂದರೆ, ಸರಕಾರವು ಶಾಸಕರುಗಳ ಮೇಲೆ ಹಾಕಿರುವ ಕೇಸನ್ನು ವಾಪಸ್ ತೆಗೆದುಕೊಳ್ಳುತ್ತದೆ ಅಂದರೆ, ಸರ್ಕಾರವು ಶಾಸಕರುಗಳು ಮೇಲೆ ಹಾಕಿರುವ ಕೇಸನ್ನು ವಾಪಸ್ಸು ತೆಗೆದುಕೊಳ್ಳುತ್ತದೆ ಅಂದರೆ, ಜಿಲ್ಲಾಧಿಕಾರಿಯು ಬೇಕೆಂತಲೇ ಶಾಸಕರುಗಳ ಮೇಲೆ ಒಂದು ರೀತಿಯಲ್ಲಿ ಡಿಕ್ಟೇಟರ್‌ಶಿಪ್ ನಡೆಸುತ್ತಾ ಇದ್ದಾರೆ ಎಂದು ಅರ್ಥವಾಗುತ್ತದೆ. ಆದ್ದರಿಂದ ಈ ಕುರಿತು ಎನ್‌ಕ್ವೈರಿ ಮಾಡಿ, ಅದರ ರಿಸಲ್ಟ್ ಬರುವ ತನಕ ಜಿಲ್ಲಾಧಿಕಾರಿಯನ್ನು ಅಮಾನತ್ತಿನಲ್ಲಿಡಿ. ಅದರಲ್ಲಿ ಏನು ತಪ್ಪಾಗುತ್ತದೆ? ಇಲ್ಲವಾದರೆ ಇಂಥ ತಪ್ಪುಗಳನ್ನು ಮಾಡುತ್ತಿರತಕ್ಕಂಥ ಅಧಿಕಾರಿಗಳಿಗೆ ಸರಕಾರವೇ ರಕ್ಷಣೆ ಕೊಡುತ್ತದೆ ಎಂಬ ಅರ್ಥವು ಬರುತ್ತದೆ. ಸಾರ್ವಜನಿಕರಿಗೆ, ಶಾಸಕರುಗಳಿಗೆ, ಈ ರೀತಿಯಾಗಿ ಅಗೌರವ ತೋರಿಸತಕ್ಕಂಥ ಒಬ್ಬ ಅಧಿಕಾರಿಯ ಮೇಲೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಹೀಗೆ ಅಧಿಕಾರಿಗಳು ವರ್ತಿಸಿದರೆ ನಾಳೆಯ ದಿನ ವಿರೋಧಪಕ್ಷಗಳು ಹೋರಾಟವನ್ನು ಮಾಡಲು ಜನರ ಪರ ಹೋರಾಡಲು ಸಾಧ್ಯವಾಗುತ್ತದೆಯೇ? ಎಂಬುದನ್ನು ತಾವುಗಳು ಹೇಳಬೇಕು. ಆದ್ದರಿಂದ ಒಂದು ಕ್ರಮವನ್ನು ತೆಗೆದುಕೊಳ್ಳುವುದರಿಂದ ಇಡೀ ರಾಜ್ಯ ಅಧಿಕಾರಿಗಳಿಗೆ ಸರಕಾರವು ಒಂದು ಎಚ್ಚರಿಕೆಯನ್ನು ಕೊಟ್ಟ ಹಾಗೆ ಆಗುತ್ತದೆ. ಅದಕ್ಕೋಸ್ಕರವಾಗಿ ವಿಚಾರಣೆ ಮುಗಿಯುವ ತನಕ ಜಿಲ್ಲಾಧಿಕಾರಿಗಳನ್ನು ಅಮಾನತ್ತಿನಲ್ಲಿಡಿ. ಆ ಕುರಿತು ವಿಚಾರಣೆ ನಡೆಸಬೇಕೆಂದು ನಾನು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಾದ ಪ್ರಕಾಶ್‌ರವರು ತಮ್ಮ ಹೇಳಿಕೆಯ ಮೂಲಕ ಸ್ಪಷ್ಟಪಡಿಸಿದ್ದಾರೆ. ಈ ಮೊಕದ್ದಮೆಗಳನ್ನು ಹಾಕಿದ್ದನ್ನು ವಾಪಸ್ ತೆಗೆದುಕೊಂಡಿದ್ದೇವೆ, ಅಕ್ರಮಕೂಟ, ಅಲ್ಲಿ ನಡೆದಿಲ್ಲ, ಮುಂತಾಗಿ ಹೇಳಿ ಆ ಜಿಲ್ಲಾಧಿಕಾರಿಗಳ ಬಗ್ಗೆ ಒಂದು ವರದಿಯನ್ನು ತರಿಸಿಕೊಳ್ಳುತ್ತೇವೆ ಎಂದು ಹೇಳಿದರು. ಇದರ ಅರ್ಥ ಜಿಲ್ಲಾಧಿಕಾರಿ ಮಾಡಿದ್ದು ತಪ್ಪು ಎಂದು ನೇರವಾಗಿ ಹೇಳಿದಂತಾಯಿತು. ಮಾನ್ಯ ಮಂತ್ರಿಗಳ ಹೇಳಿಕೆಯಿಂದ ಅಲ್ಲಿ ಅಕ್ರಮಕೂಟ ಆಗಿಲ್ಲ, ಆದಕಾರಣ ಮೊಕದ್ದಮೆ ವಾಪಸ್ ಪಡೆಯುತ್ತೇವೆ ಎಂದು ಹೇಳಿರುವುದರಿಂದ ಜಿಲ್ಲಾಧಿಕಾರಿ ಮಾಡಿರತಕ್ಕಂಥಾದ್ದು ಅಕ್ಷಮ್ಯ ಅಪರಾಧ ಎನ್ನುವುದನ್ನು ಮಾನ್ಯ ಸಚಿವರೇ ಹೇಳಿದಂತಾಗಿದೆ. ಆದ್ದರಿಂದ ಸರಕಾರಕ್ಕೆ ಉಳಿದಿರತಕ್ಕಂಥಾದ್ದು ಏನೆಂದರೆ ಆ ಅಧಿಕಾರಿಯನ್ನು ಅಮಾನತ್ತಿನಲ್ಲಿಡ ಬೇಕಾದುದು ಮಾತ್ರ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೇ, ಅವರು ಹೇಳುವುದು fallacy. ಈ ರೀತಿಯಲ್ಲಿ ಒಂದು ವರದಿ ತರಿಸಿಕೊಡುತ್ತೇನೆ ಎಂಬ ಮಾತನ್ನು ಹೇಳಿದ ಮೇಲೆ, ನೀವು ಅದನ್ನು

ಸಂಪೂರ್ಣವಾಗಿ ಒಪ್ಪಿಕೊಂಡಿದ್ದೀರಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುವ ವಿಚಾರದಲ್ಲಿ ನಿಮ್ಮ ಒಪ್ಪಿಗೆ ಇದೆ ಎಂದು ಹೇಳಿದ್ದಾರೆ. ಲಾಜಿಕ್‌ನಲ್ಲಿ ಏನೋ ಹೇಳುತ್ತಾರಲ್ಲ? ಲಾಜಿಕ್‌ನಲ್ಲಿ fallacies ಎಂದು ಇರುತ್ತವೆ. Egg comes out of hen and hen comes out of egg. Therefore, egg comes out of egg ಎನ್ನುವ ರೀತಿಯಲ್ಲಿ ಇರುತ್ತದೆ. ಆದರೆ ಅದು ಇದಲ್ಲ. ಆದರೆ ಇಲ್ಲಿರುವ ಪ್ರಶ್ನೆ ಏನೆಂದರೆ, ಯಾರೇ ಶಾಸಕರುಗಳಾಗಲೀ, ಮನವಿದಾರರುಗಳಾಗಲೀ, ಅದನ್ನು ಕೊಟ್ಟಿರತಕ್ಕಂಥ ಸಂದರ್ಭದಲ್ಲಿ ನಾವು ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥಾದ್ದು ಸರಿಯಾದುದಲ್ಲ. ಇದರ ಬಗ್ಗೆ ರಾಜ್ಯದ ಎಲ್ಲಾ ಅಧಿಕಾರಿಗಳಿಗೂ ಒಂದು ಸಂದೇಶ ಹೋಗಬೇಕೆಂದು ಹೇಳುತ್ತೀರಿ. ನಾನು ಸದನದ ಮೂಲಕ, ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಎಲ್ಲಾ ಶಾಸಕರನ್ನು ಮತ್ತು ಮನವಿ ಕೊಡತಕ್ಕಂಥ ಪ್ರತಿಯೊಬ್ಬ ನಾಗರೀಕರನ್ನು ಗೌರವದಿಂದ ಕಾಣತಕ್ಕಂಥಾದ್ದು ಅಧಿಕಾರಿಗಳ ಆದ್ಯಕರ್ತವ್ಯ. ಆದರೆ ಅವೊತ್ತು ಬೇರೆ ಪ್ರಮುಖ ಕಾರ್ಯನಿಮಿತ್ತ ಕಛೇರಿಯಿಂದ ಹೋಗಿದ್ದೇವೆ ಎಂದು ಅಧಿಕಾರಿಗಳು ಹೇಳುತ್ತಾರೆ. ಮಾನ್ಯ ಈಶ್ವರಪ್ಪನವರು ಧರಣಿ ಕುಳಿತಿರುವಾಗ ಜಿಲ್ಲಾಧಿಕಾರಿಗಳು ಹಾದು ಹೋದರು ಎಂದು ಹೇಳಿದ್ದಾರೆ. ಆದ್ದರಿಂದ ನಾವು ವಿಭಾಗಧಿಕಾರಿಗಳ ಮೂಲಕ ಅಲ್ಲಿ ಏನು ನಡೆದಿದೆ ಎಂಬ ಬಗ್ಗೆ ಒಂದು ವರದಿಯನ್ನು ತರಸಿಕೊಳ್ಳುತ್ತೇವೆ. ಇನ್ನೊಂದು ವಿಚಾರ ಅಂದರೆ ಅಕ್ರಮ ಕೂಟ, ಮುಂತಾದ ಕೇಸ್‌ಗಳನ್ನು ಸೆಕ್ಷನ್ 120 ಬಿ ಬಂದಾಗ ಅದನ್ನು ತೆಗೆದು ಬಿಡುತ್ತಾರೆ. ಇದು ಸಾಮಾನ್ಯವಾಗಿ ನಡೆಯತಕ್ಕಂಥಾದ್ದು ಸೆಕ್ಷನ್ 145 ಬಂದಾಗ ಸೇರಿಸಿ ಬಿಡುತ್ತಾರೆ.

(ಗೊಂದಲ)

ಉಪಾಧ್ಯಕ್ಷರು : ತಾವುಗಳು ಎಲ್ಲರೂ ಕುಳಿತುಕೊಳ್ಳಿ.....

ಶ್ರೀ ಎಂ.ಪಿ. ಪ್ರಕಾಶ್ : ತಾವುಗಳು ಸರಕಾರದಿಂದ ಉತ್ತರ ಬಯಸುತ್ತೀರೋ? ಇಲ್ಲವೋ? ನಾವು ಉತ್ತರ ಕೊಟ್ಟ ಮೇಲೆ ತಾವುಗಳು ಏನಾದರೂ ಸ್ಪಷ್ಟೀಕರಣ ಇದ್ದರೆ ಕೇಳಿ. ಈಗ ಪ್ರಶ್ನೆ ಏನೆಂದರೆ ಮಾಮೂಲಿಯಾಗಿ ಈ ತರಹ ಪರಿಸ್ಥಿತಿಯಿದ್ದಾಗ ಈ ತರಹ ಬರೆದು ಕಳುಹಿಸುತ್ತಾರೆ. ಆದ್ದರಿಂದ ಈಗ ನಾವು ಸದರಿ ಮೊಕದ್ದಮೆಯನ್ನು ವಾಪಸ್ ಪಡೆದುಕೊಳ್ಳುತ್ತೇವೆ ಎಂದು ತಮ್ಮ ಮುಂದೆ ಈಗಾಗಲೇ ಹೇಳಿದ್ದೇನೆ. ಈ ಕುರಿತು ಮಾನ್ಯ ಮುಖ್ಯಮಂತ್ರಿಗಳಿಗೂ ವಿಷಯವನ್ನು ತಿಳಿಸಿದ್ದೇನೆ. ಈಗ ಮಾನ್ಯ ಗೃಹ ಸಚಿವರು ಕೂಡ ಬಂದಿದ್ದಾರೆ. ಅವರು ಕೂಡ ಸಂದರ್ಭಕ್ಕೆ ಸರಿಯಾದ ಸಂಬಂಧಪಟ್ಟ ಉತ್ತರವನ್ನು ಕೊಡಲು ಸಂಬಂಧಪಟ್ಟ ವಿಭಾಗಾಧಿಕಾರಿಯವರಿಂದ ತರಿಸಿಕೊಂಡು ಸೂಕ್ತ ಕ್ರಮವನ್ನು ಮುಖ್ಯಮಂತ್ರಿಯವರ ಜೊತೆಗೆ ಸಮಾಲೋಚಿಸಿ ಕೈಗೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ಇವೊತ್ತು ಅವರು ಏನೂ ಅಪರಾಧಗಳನ್ನು ಮಾಡಿಲ್ಲ. ಜನಪ್ರತಿನಿಧಿಗಳಾಗಿ ಇಡೀ ರಾಜ್ಯದಲ್ಲಿ 13ನೇ ತಾರೀಖು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರು. ಅಂದು ಎಲ್ಲಾ ಕಡೆಗಳಲ್ಲಿಯೂ ಒಂದು ಗಂಟೆ ಸತ್ಯಾಗ್ರಹ ಮಾಡಬೇಕೆಂದು ಹೇಳಿದ್ದೆವು. ಅದಾದ ಮೇಲೆ ಮನವಿಯನ್ನು ಕೊಡಬೇಕೆಂದು ಮಾಡಿದ್ದೆವು. ಇದು ಇಡೀ ರಾಜ್ಯದಲ್ಲಿ 250 ಕಡೆಗಳಲ್ಲಿ ನಡೆದಿದೆ. ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ. ನಾವು ವೈಯಕ್ತಿಕವಾಗಿ

ಯಾವುದೇ ಅಧಿಕಾರಿಗಳ ಮೇಲೆ ಗೂಬೆ ಕೂರಿಸುವ ಪ್ರಯತ್ನವನ್ನು ಮಾಡುತ್ತಾ ಇಲ್ಲ. ಕುಂಬ್ಳೆ ಸುಂದರರಾಯರು ಹಿಂದಿನ ದಿವಸ ಅಲ್ಲಿನ ಡಿ.ಸಿ.ಯವರ ಹತ್ತಿರ ಮಾತನಾಡುವಾಗ ಪತ್ರಿಕೆಗಳಲ್ಲಿ ಮುಂಚಿತವಾಗಿಯೇ ರಾಜ್ಯದಾದ್ಯಂತ ತಾಲ್ಲೂಕು ಕಛೇರಿಗಳ ಮತ್ತು ಡಿ.ಸಿ. ಕಛೇರಿಗಳ ಮುಂದೆ ಬಿಜೆಪಿ ಕಾರ್ಯಕರ್ತರು ಧರಣಿ ಕುಳಿತುಕೊಳ್ಳುತ್ತಾರೆ ಎಂದು ಪ್ರಕಟವಾಗಿದೆ ಮುಂತಾಗಿ ತಿಳಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮ್ಮ ಶಾಸಕರು ಹೆಚ್ಚು ಜನರಿದ್ದಾರೆ. ಅಂದು ಮಾಜಿ ಪ್ರಧಾನಿಯವರು ಭೇಟಿ ಕೊಟ್ಟಾಗ ಜಿಲ್ಲಾಧಿಕಾರಿಯವರು ಅವರ ಹತ್ತಿರ ಹೋಗಬೇಕು, ಹೋಗಿದ್ದು ಸರಿ. ಆದರೆ 10.30ಕ್ಕೆ ಅವರು ಧರಣಿ ಕುಳಿತಿದ್ದರು. ಜಿಲ್ಲಾಧಿಕಾರಿ ಹೋಗುವಾಗ 11.30 ಗಂಟೆ. ಜಿಲ್ಲಾಧಿಕಾರಿಯವರು ಕುಳಿತವರನ್ನು ಮಾತನಾಡಿಸಿ ಏಕೆ ಕುಳಿತಿದ್ದೀರಿ? ನಾನು ಇಂಥ ಕಡೆಗೆ ಹೋಗುತ್ತಿದ್ದೇವೆ ಎಂದು ಸೌಜನ್ಯದ ಮಾತನ್ನು ಆಡಬಹುದಾಗಿತ್ತು. ಒಂದು ವೇಳೆ ಅದು ಅವರಿಗೆ ಅವಮಾನ ಎಂದು ಕಂಡರೆ ಅದೂ ಬೇಡ. ಹಾಗಾದರೆ ಅಲ್ಲಿ ಹೆಡ್‌ಕ್ವಾರ್ಟರ್ ಅಸಿಸ್ಟೆಂಟ್ ಅಥವಾ ಇನ್ನಾವ ಅಧಿಕಾರಿಯಾದರೂ ಅಲ್ಲಿ ಕುಳಿತಿರಬೇಕಲ್ಲವೆ? ಈಗ ನಿಮ್ಮಲ್ಲಿ ಇರುವ ವರದಿಯನ್ನು ಒಬ್ಬ ಹೆಣ್ಣುಮಗಳು ಕೊಟ್ಟಿದ್ದಾರಲ್ಲವೆ? ಅವರೇ ಹೇಳಿರುವ ಪ್ರಕಾರ ಫೋನ್ ಮಾಡಿಸಿ ಧರಣಿ ಕುಳಿತಿರುವವರು ಡಿಸಿ ಯವರು ಬೇಕು ಎಂದು ಕೇಳಿಕೊಂಡರು. ಫೋನ್‌ನಲ್ಲಿ ಮಾತನಾಡಿದಾಗ ಡಿಸಿ ಯವರು 4 ಗಂಟೆಯವರೆಗೆ ಬರುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಆಗ ಧರಣಿ ನಿರತರು ತಮ್ಮ ಮನವಿಯನ್ನು ಗೋಡೆಗೆ ಅಂಟಿಸಿ ಹೋದರು ಎಂದು ಕಂಪ್ಲೈಂಟನ್ನು ಅವರು ಕೊಟ್ಟರು. ಮಾನ್ಯ ಸಚಿವರು ಅಲ್ಲಿಗೆ ತಹಶೀಲ್ದಾರರು ಬಂದರು ಎಂದು ಹೇಳಿದ್ದಾರೆ. ಆದರೆ ತಹಶೀಲ್ದಾರರು ಇವರು ಅಂಟಿಸಿ ವಾಪಸ್ ಹೋಗುವ ಸಂದರ್ಭದಲ್ಲಿ ಬಂದಿದ್ದಾರೆ. ಜಿಲ್ಲಾಧಿಕಾರಿಯವರು ಈ ರೀತಿಯಾಗಿ ತಪ್ಪು ಮಾಡಿಯೂ, ಅಲ್ಲಿ ತಹಶೀಲ್ದಾರರು ಬಂದಿದ್ದರೂ ಅವರ ಕೈಗೆ ಕೊಡದೆ ಅಂಟಿಸಿ ಉದ್ಧಟತನವನ್ನು ತೋರಿಸಿದ್ದಾರೆ ಎಂಬ ಆರೋಪವನ್ನು ಮಾಡುವುದಾದರೆ, ಒಬ್ಬ ಕ್ಲರ್ಕ್‌ನ ಹತ್ತಿರ ಕಂಪ್ಲೈಂಟ್ ತೆಗೆದುಕೊಂಡು ಶಾಸಕರುಗಳ ಮೇಲೆ ಕೇಸ್ ಹಾಕುತ್ತಾರೆ ಎನ್ನುವುದಾದರೆ ಇದು ಸರಿಯೇ? ಇಲ್ಲಿ ಬಿಜೆಪಿ, ಜನತಾದಳ, ಕಾಂಗ್ರೆಸ್ ಮುಂತಾಗಿ ಯಾವುದೇ ಪಕ್ಷದ ಮಿತಿಯೂ ಬೇಡ. ಇಲ್ಲಿ ಅಧಿಕಾರಿಗಳ ಆಟಿಟ್ಯೂಡ್ ನೋಡಬೇಕು. ಇಲ್ಲಿ ನೀವು ಈಗ ಕೇಸನ್ನು ವಾಪಸ್ ತೆಗೆದುಕೊಂಡಿದ್ದೀರಿ. ನಮ್ಮ ಅಧ್ಯಕ್ಷರು ಸರಕಾರವು ವಾಸ್ತವಾಂಶವನ್ನು ಒಪ್ಪಿಕೊಂಡು ಕೇಸನ್ನು ವಾಪಸ್ ತೆಗೆದುಕೊಂಡಿದೆ ಎಂದು ಹೇಳುತ್ತಾರೆ ಎಂದು ಇಟ್ಟುಕೊಳ್ಳೋಣ. ಅದರ ಪರಿಣಾಮ ಏನಾಗುತ್ತದೆ? ಇನ್ನು ಮುಂದೆ ರಾಜ್ಯದ ಜನರು, ಶಾಸಕರು, ಜನಪರ ಹೋರಾಟವನ್ನು ಮಾಡಲು ಮುಂದಾಗುತ್ತಾರೆಯೇ? ನೀವು ಈ ಸ್ಥಾನಕ್ಕೆ ಬರಬಹುದು, ನಾವು ಅಲ್ಲಿಗೆ ಹೋಗಬಹುದು. ನಾವು ಇಲ್ಲಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮದೇ ಆದ ರೀತಿಯಲ್ಲಿ ಪ್ರತಿಭಟನೆಯನ್ನು ಮಾಡುತ್ತೇವೆ. ಇಲ್ಲಿ ಧರಣಿ, ಸತ್ಯಾಗ್ರಹವನ್ನು ಮಾಡುತ್ತೇವೆ. ಅನೇಕ ಸಂದರ್ಭಗಳಲ್ಲಿ ಕೆಇಬಿಯಲ್ಲಿನ ವಿದ್ಯುತ್ ಅಭಾವದ ಬಗ್ಗೆ ಮತ್ತಿತರ ವಿಷಯಗಳ ಬಗ್ಗೆ ಕೆಇಬಿ ಕಛೇರಿಗೆ ಬೀಗವನ್ನು ಕೂಡ ಹಾಕಿದ್ದು ಇದೆ. ಹೀಗೆ ಜನರು ನೊಂದು ಇಂಥ ಪ್ರತಿಭಟನೆಗಳನ್ನು ಮಾಡುತ್ತಾರೆ. ಆದರೆ ಕಾನೂನು ಚೌಕಟ್ಟಿನಲ್ಲಿ ಯೋಚನೆ ಮಾಡುವುದಾದರೆ, ಧರಣಿ ಮಾಡಿದ್ದಕ್ಕೆ ಅಕ್ರಮ ಚಟುವಟಿಕೆ ಎಂದು ಶಾಸಕರ ಮೇಲೆ ಕೇಸ್ ಹಾಕುವುದಾದರೆ, ಅಂಥ ಅಧಿಕಾರಿಯ ಮನೋವೃತ್ತಿ ಹೇಗೆ ಇರಬಹುದು?

ಜನಸಾಮಾನ್ಯರು ಅಂಥ ಕಛೇರಿಗೆ ಹೋಗಲು ಸಾಧ್ಯವೇ? ಅವರಿಗೆ ಅಲ್ಲಿ ನ್ಯಾಯ ಸಿಗಬಹುದೆ? ಈ ರೀತಿಯ ಉದ್ಧಟತನವನ್ನು ನೀವು ಸಹಿಸುತ್ತೀರಾ? ಆದ್ದರಿಂದ ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಿ ಡಿವಿಜನಲ್ ಕಮೀಶನರ್‌ರಿಂದ ವಿಚಾರಣೆ ಮಾಡಿಸಿ. ಆ ರೀತಿಯ ಉದ್ಧಟತನವನ್ನು ಪ್ರದರ್ಶಿಸುವ ಅಧಿಕಾರಿಯನ್ನು ದಯಮಾಡಿ ಅಂಥ ದೊಡ್ಡ ಹುದ್ದೆಯಲ್ಲಿ ಇಡಬೇಡಿ. ಆತನನ್ನು ಸಸ್ಪೆಂಡ್ ಮಾಡಿ ಅಮಾನತ್ತಿನಲ್ಲಿಡಿ ಎಂದು ನಾವು ಕೇಳುತ್ತಾ ಇದ್ದೇವೆ. ಇಷ್ಟನ್ನು ಕೂಡ ಮಾಡದೇ ಕೇಸ್ ವಾಪಸ್ ತೆಗೆದುಕೊಂಡು ಏನೋ ಉಪಕಾರ ಮಾಡುತ್ತಿದ್ದೇವೆ ಎಂಬ ಮನೋಭಾವನೆಯನ್ನು ನೀವು ತಾಳುವುದಾದರೆ ನಾವು ಏನು ಹೇಳಬೇಕೆಂದು ಅರ್ಥವಾಗುತ್ತಾ ಇಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಅಧಿಕಾರಿಯನ್ನು ಸಸ್ಪೆಂಡ್ ಮಾಡದೇ ಕೇಸ್ ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಏನು ಪ್ರಯೋಜನ?

ಶ್ರೀ ಡಿ.ವಿ ಸದಾನಂದ ಗೌಡ : ಜಿಲ್ಲಾಧಿಕಾರಿ ಅಂದರೆ ಇಡೀ ಜಿಲ್ಲೆಯ ಉಸ್ತುವಾರಿ ನೋಡಿಕೊಳ್ಳತಕ್ಕಂಥ ಜವಾಬ್ದಾರಿಯುಳ್ಳ ವ್ಯಕ್ತಿ. ಹೀಗಿರುವಾಗ ಜಿಲ್ಲಾದ್ಯಂತ ಒಂದು ರಾಜಕೀಯ ಪಕ್ಷದಿಂದ ಪ್ರತಿಭಟಣೆ ನಡೆಯುತ್ತದೆ ಎಂದು ಹೇಳತಕ್ಕಂಥ ಸಂದರ್ಭದಲ್ಲಿ ಅಲ್ಲಿನ ಶಾಸಕರು ಪ್ರತಿಭಟನೆಯಲ್ಲಿ ಭಾಗವಹಿಸುತ್ತಾರೆಂದು ಹೇಳುವಂಥ ಸಂದರ್ಭದಲ್ಲಿ ಜಿಲ್ಲಾಧಿಕಾರಿಯ ಜವಾಬ್ದಾರಿ ಏನು? ಜಿಲ್ಲಾಧಿಕಾರಿಗೆ ಮೊದಲ ದಿನವೇ ಧರಣಿ ನಡೆಯುವ ವಿಚಾರ ತಿಳಿದಿದ್ದರೂ ಕೂಡ ಮರುದಿವಸ ಧರಣೆ ಕುಳಿತ ಶಾಸಕರುಗಳ ಎದುರನಲ್ಲಿಯೇ ಕಾರ್‌ನಲ್ಲಿ ಅಹಂಕಾರದಲ್ಲಿ ಹೋಗುವ ಪ್ರವೃತ್ತಿ ಇರುವುದಾದರೆ ಶಾಸಕರನ್ನು ನಿರ್ಲಕ್ಷ್ಯ ಮಾಡುವುದಾದರೆ ಸಾಧಾರಣವಾಗಿರುವ ಶಾಸಕರು ಇಲ್ಲಿ ಕೆಲಸ ಮಾಡಲು ಸಾಧ್ಯವಿದೆಯೇ? ಅಲ್ಲಿ ಯಾರ್ಯಾರು ಕುಳಿತಿದ್ದಾರೆ ಎಂದು ತಿಳಿದುಕೊಳ್ಳುವ ಜವಾಬ್ದಾರಿಯು ಅವರಿಗೆ ಇಲ್ಲವೆ? ಅಲ್ಲಿ ನೂರಾರು ಪೋಲೀಸರು, ಪೋಲೀಸ್ ವ್ಯಾನ್‌ಗಳು, ಎಲ್ಲಾ ವ್ಯವಸ್ಥೆಗಳನ್ನು ಮಾಡಿದ್ದಾರೆ, ಇಷ್ಟೆಲ್ಲಾ ಮಾಡಿದ ಮೇಲೆಯೂ ಅಲ್ಲಿ ಶಾಸಕರು ಇದ್ದಾರೆ ಎಂಬುದು ಗೊತ್ತಿದ್ದರೂ ಕೂಡ ಅವರೆದುರು ಹಾಗೆ ಹೋಗುವುದು ಸರಿಯೇ? ಇನ್ನೂ ಒಂದೆರಡು ಉದಾಹರಣೆಗಳನ್ನು ಕೊಡಬಯಸುತ್ತೇನೆ. ಸನ್ಮಾನ್ಯ ಸಚೇತಕ ವಸಂತ ಬಂಗೇರಾರವರು ಊರಿನಲ್ಲಿ ಬಿರುಗಾಳಿ ಬೀಸಿ ಕೋಟ್ಯಾಂತರ ರೂಪಾಯಿಗಳ ನಷ್ಟವುಂಟಾದಾಗ ಜಿಲ್ಲಾಧಿಕಾರಿ ಅಲ್ಲಿಗೆ ಹೋಗಿ ನೋಡಿ ನಷ್ಟಕ್ಕೀಡಾದವರಿಗೆ ಪರಿಹಾರ ಕೊಡಲು ಕೂಡ ಹೋಗಿಲ್ಲ. ಹಾಗೆಯೇ ಪುತ್ತೂರಿನಲ್ಲಿ ಸೌಮ್ಯ ಎಂಬುವಳ ಕೊಲೆ ಪ್ರಕರಣವಾಯಿತು. ಸುಮಾರು ಒಂದೂವರೆ ದಿವಸಗಳ ಕಾಲ ಅಲ್ಲಿ ತಳವೂರಿದಂಥ ಡಿಸಿ ಅಲ್ಲಿನ ಸ್ಥಳೀಯ ಶಾಸಕರನ್ನು ಕರೆದು ಆ ಪ್ರದೇಶದಲ್ಲಿ ಹೇಗೆ ಶಾಂತಿ ಸ್ಥಾಪನೆ ಮಾಡಬಹುದು ಎಂದು ಚರ್ಚಿಸುವ ಸೌಜನ್ಯ ತೋರಿಸಿಲ್ಲ. ನಿಮ್ಮ ಜಿಲ್ಲಾಪರಿಷತ್‌ನಲ್ಲಿ ಕಾರ್ಯದರ್ಶಿಯಾಗಿ ವಿಚಾರಗಳನ್ನು ಪ್ರಸ್ತಾಪ ಮಾಡಿದಾಗ ತಾನು ಕಾರ್ಯದರ್ಶಿಯ ಸ್ಥಾನದಲ್ಲಿದ್ದೇನೆ ಎಂಬುದನ್ನು ತಿಳಿದುಕೊಳ್ಳದೇ ನೇರವಾಗಿ ಜಿಲ್ಲಾಪಂಚಾಯತ್‌ನಿಂದ ಹೊರಗೆ ನಡೆಯತಕ್ಕಂಥ ಕೆಲಸಗಳು ಇವರಿಂದ ಆಗುತ್ತಿವೆ. ಆ ಅಧಿಕಾರಿ ಅವಮಾನ ಮಾಡಿದ್ದಾನೆ. ಇಂಥ ರೀತಿಯಲ್ಲಿ ಶಾಸಕರಿಗೆ ಅವಮಾನ ಮಾಡುವ ವ್ಯಕ್ತಿಯ ಬಗ್ಗೆ ಸದನದಲ್ಲಿ ಕೆಲವು ಬಾರಿ ಪ್ರಸ್ತಾಪವಾಗಿದ್ದರೂ ಕೂಡ, ಶಾಸಕರು ಇಂಥ ಬೇಡಿಕೆ ಇಟ್ಟು ಅವರನ್ನು ಸಸ್ಪೆಂಡ್ ಮಾಡಿ, ವಿಚಾರಣೆ ಮಾಡಿ, ಅವರು ತಪ್ಪಿತಸ್ಥರು ಅಲ್ಲದಿದ್ದರೆ ಮತ್ತೆ ರೀಇನ್‌ಸ್ಟೇಟ್ ಮಾಡಿ

ಎಂದು ಕೇಳಿದಾಗಲೂ ಕೂಡ ಈ ಸರಕಾರವು ಅದನ್ನು ಮಾಡುವುದಿಲ್ಲ ಎಂದು ಹೇಳಿದರೆ ಇದಕ್ಕಿಂದ ಹೆಚ್ಚು ನಾವೇನು ಮಾಡಬೇಕು? ಯಾವ ಮುಖ ಇಟ್ಟುಕೊಂಡು ಅಲ್ಲಿಯ ಶಾಸಕರು ಮಂಗಳೂರಿನಲ್ಲಿ ಕೆಲಸ ಮಾಡಬೇಕು? ಅದೇ ಅಧಿಕಾರಿ ರಾಜಾರೋಶವಾಗಿ ಶಾಸಕರುಗಳ ಎದುರು ನಿಂತುಕೊಂಡು ಮೊನ್ನೆ ಮಾಡಿದ್ದು ಸಾಲದೇ? ಎಂದು ನಮ್ಮನ್ನೇ ಕೇಳಿದರೆ ನಾವೇನು ಹೇಳಬೇಕು? ಹೀಗೆ ಮಾಡಿದರೆ ಯಾರಿಗೂ ಇದು ಶೋಭೆ ತರುವಂಥಾದ್ದಾಗುವುದಿಲ್ಲ. ಶಾಸಕರಿಗೆ ಈ ರೀತಿಯಲ್ಲಿ ಅವಮಾನವಾಗುವಂಥಾದ್ದನ್ನು ನಾವು ಪ್ರತಿಭಟನೆ ಮಾಡಲೇಬೇಕು. ಡಿಸಿಯನ್ನು ಕೂಡಲೇ ಸಸ್ಪೆಂಡ್ ಮಾಡಬೇಕು. ವಿಭಾಗಾಧಿಕಾರಿಯವರಿಂದ ತನಿಖೆ ನಡೆಸಬೇಕು ಇಲ್ಲವಾದರೆ ಇದನ್ನು ನಾವು ಸಹಿಸಿಕೊಳ್ಳಲು ಸಾಧ್ಯವಿಲ್ಲ. ನಾವು ಪ್ರತಿಭಟನೆ ಮಾಡಲೇಬೇಕಾದ ಸಂದರ್ಭ ನಿರ್ಮಾಣವಾಗಿದೆ.

(ಮಾನ್ಯ ಬಿಜೆಪಿ ಸದಸ್ಯರುಗಳಾದ ಶ್ರೀ ಕುಂಬ್ಳೆ ಸುಂದರರಾವ್, ಶ್ರೀ ಕೆ. ಜಯರಾಮಶೆಟ್ಟಿ, ಶ್ರೀ ಡಿ.ವಿ. ಸದಾನಂದ ಗೌಡ, ಶ್ರೀ ರುಕ್ಮಯ್ಯ ಪೂಜಾರಿಯವರು ಬಾವಿಗೆ ಧಾವಿಸಿದರು)

ಉಪಾಧ್ಯಕ್ಷರು : ತಮಗೆಲ್ಲರಿಗೂ ವಿಷಯ ಪ್ರಸ್ತಾಪಿಸಲು ಸಮಯ ಕೊಟ್ಟಿದ್ದೇನೆ. ನೀವು ಹೇಳುವುದನ್ನು ಹೇಳಿದ್ದೀರಿ. ಈಗ ಸರಕಾರದಿಂದ ಉತ್ತರವನ್ನು ಕೇಳುವ ತಾಳ್ಮೆಯು ತಮಗಿಲ್ಲವೆ?

(ಗೊಂದಲ)

ಶ್ರೀ ಎ. ರುಕ್ಮಯ್ಯ ಪೂಜಾರಿ : ಕೇಸ್ ವಾಪಸ್ ತೆಗೆದುಕೊಂಡ ಕೂಡಲೇ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ.

ಉಪಾಧ್ಯಕ್ಷರು : ತಾವುಗಳೆಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೇ, ಸರಕಾರವು ಈಗ ಮಾನ್ಯ ಸದಸ್ಯರು ಹೇಳಿದ ವಿಚಾರಗಳನ್ನು ಸಂಪೂರ್ಣವಾಗಿ ತಿರಸ್ಕಾರ ಮಾಡಿಲ್ಲ. ಯಾವುದೇ ಶಾಸಕರು, ಸಾರ್ವಜನಿಕರುಗಳು ಮನವಿಪತ್ರವನ್ನು ಕೊಡುವಾಗ ಅವರುಗಳನ್ನು ಗೌರವದಿಂದ ಕಾಣಬೇಕೆಂಬುದು ಸರಕಾರದ ನಿಲುವು. ಅಲ್ಲಿ ಅಧಿಕಾರಿಗಳು ಮಾಡಿರತಕ್ಕಂಥ ವಿಚಾರಗಳನ್ನು ನಾವು ಸಂಪೂರ್ಣವಾಗಿ ಒಪ್ಪುವುದಿಲ್ಲ. ಶಾಸಕರುಗಳ ಮೇಲೆ ಹಾಕಿರತಕ್ಕಂಥ ಕೇಸ್‌ಗಳನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುವ ಆದೇಶವನ್ನು ಈ ದಿವಸವೇ ನಾವು ಕಳುಹಿಸಿಕೊಡುತ್ತೇವೆ. ಇಲ್ಲಿ ಶಾಸಕರುಗಳು ಹೇಳುವ ಹಾಗೆ ಅಧಿಕಾರಿಯನ್ನು ಅಮಾನತ್ತಿನಲ್ಲಿಡುವ ವಿಚಾರ. ಹೀಗೆ ಅಮಾನತ್ತಿನಲ್ಲಿಡಬೇಕಾದರೆ ನಮಗೆ ಬಂದಿರತಕ್ಕಂಥ ಮಾಹಿತಿಗಳ ಪ್ರಕಾರ ಅವರು ಶಿಷ್ಟಾಚಾರದ ಸಂಪ್ರದಾಯದ ಪ್ರಕಾರ ಮಾಜಿ ಪ್ರಧಾನಿಯವರ ಜೊತೆಗೆ ಹೋಗಿದ್ದರಿಂದ ಕಛೇರಿಯಲ್ಲಿ ಇರಬೇಕಾದಂಥ ಅಧಿಕಾರಿಗಳು ಇರಲು ಆಗಲಿಲ್ಲ ಎಂಬ ಕಾರಣ ಇದೆ. ಆದರೆ ತಹಶೀಲ್ದಾರರು ಮತ್ತು ಆಹಾರ ಆಯುಕ್ತರು ಕೂಡ ಡಿಸಿ ಕಚೇರಿಗೆ ಹೋಗಿದ್ದರು ಎನ್ನುವಂಥ ವಿಚಾರದಲ್ಲಿ ಅವರು ಸಕಾಲದಲ್ಲಿ ಬಂದಿಲ್ಲ ಅನಂತರ ಬಂದರು ಎನ್ನುವ ಮಾತನ್ನು ಯಡಿಯೂರಪ್ಪನವರು ಹೇಳಿದ್ದಾರೆ. ಇಲ್ಲಿ ಸ್ವಲ್ಪಮಟ್ಟಿಗೆ ವಸ್ತುಸ್ಥಿತಿಯ ಬಗ್ಗೆ ಭಿನ್ನಾಭಿಪ್ರಾಯವಿದೆ. ಯಾವುದೇ ವಿಚಾರದಲ್ಲಿ ನಾವು ಕೂಲಂಕಷವಾಗಿ ಕ್ರಮ ತೆಗೆದುಕೊಳ್ಳಬೇಕಾದರೆ ವಿಭಾಗಾಧಿಕಾರಿಯವರಿಂದ ವಸ್ತುಸ್ಥಿತಿಯ ಬಗ್ಗೆ

ವರದಿಯನ್ನು ತರಸಿಕೊಂಡ ನಂತರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಅಪಮಾನ ಮಾಡುವುದಕ್ಕೆ ನಾವು ಬಿಡುವುದಿಲ್ಲ. ಆ ಬಗ್ಗೆ ಯಾರೂ ಅನ್ಯಥಾ ಭಾವಿಸಬಾರದು ಎಂದು ಹೇಳಬಯಸುತ್ತೇನೆ. ಬೇರೆ ಸಂದರ್ಭಗಳಲ್ಲಿ ಹೋರಾಟ ಮಾಡುವಾಗ ಯಾರು ಉದ್ದಟತನ ಪ್ರದರ್ಶಿಸುವವರು ಇರುತ್ತಾರೆ ಎಂಬುದು ಸಂಬಂಧಪಟ್ಟವರಿಗೆ ಗೊತ್ತಿರುತ್ತದೆ. ಹೋರಾಟದ ಅಂಗ ಮತ್ತು ಭಾಗವೂ ಇದು ಆಗಿರುತ್ತದೆ. ಈ ಸರಕಾರವು ಇದನ್ನು ಒಪ್ಪುವುದಿಲ್ಲ. ಹೋರಾಟ ಮಾಡತಕ್ಕಂಥ ಸಂದರ್ಭದಲ್ಲಿ ಬಹಳ ವಿಶಿಷ್ಟವಾಗಿ ನಮ್ಮನ್ನು ಕಾಣಬೇಕೆಂದು ಕೂಡ ನಿರೀಕ್ಷಿಸುವುದು ಆಗುವುದಿಲ್ಲ. ಯಾಕೆಂದರೆ ಯಾವ ಶಕ್ತಿಗಳ ವಿರುದ್ಧ ಹೋರಾಟ ಮಾಡುತ್ತಿದ್ದಾರೆ ಎಂಬುದು ಕೂಡ ನಮಗೆ ಗೊತ್ತಿರುತ್ತದೆ. ಆದ್ದರಿಂದ ತಾವುಗಳು ಹೇಳಿದ ಪ್ರಕಾರ ನಾವು ತಮ್ಮ ಗೌರವವನ್ನು ಕಾಪಾಡುತ್ತೇವೆ. ಯಾರಿಗೂ ಕೂಡ ಅಪಮಾನವಾಗದಂತೆ ನೋಡಿಕೊಳ್ಳುತ್ತೇವೆ. ವಿಭಾಗಾಧಿಕಾರಿಗಳಿಂದ ವರದಿಯನ್ನು ತರಸಿಕೊಂಡನಂತರ ಮುಂದಿನ ಕ್ರಮವನ್ನು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿ ಕೈಗೊಳ್ಳುತ್ತೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ....... ..

ಉಪಾಧ್ಯಕ್ಷರು : ಸರಕಾರದವರು ಎಲ್ಲಾ ರೀತಿಯ ಭರವಸೆಯನ್ನು ಈಗಾಗಲೇ ಕೊಟ್ಟಿದ್ದಾರೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ವರದಿಯನ್ನು ಒಂದು ವಾರದೊಳಗಾಗಿ ತರಿಸಿಕೊಳ್ಳುತ್ತೀರಾ? ಅದಕ್ಕೆ ಸಮಯ ನಿಗದಿ ಮಾಡಿದ್ದೀರಾ?

ಶ್ರೀಮತಿ ಪ್ರಮೀಳಾ ನೇಸರ್ಗಿ : ಡಿಸಿ ಕಚೇರಿಯು ಸಾರ್ವಜನಿಕ ಸ್ಥಳವೋ ಅಲ್ಲವೊ? ಆ ಮೇಲೆ ಸೆಕ್ಷನ್ 353 ಅಮೆಂಡ್ ಮಾಡಿದ್ದಾರೆ. ಅವರು ಅಸಾಲ್ಟ್ ಮಾಡಿದ್ದಾರಾ? ನಿಮಗೆ ಬಂದ ವರದಿಯ ಪ್ರಕಾರ ಶಾಸಕರು ಅಸಾಲ್ಟ್ ಮಾಡಿದ ಬಗ್ಗೆ ಎಲ್ಲಿಯೂ ಕೂಡ ಬಂದಿಲ್ಲ. 353 ಅನ್ನು ಅಮೆಂಡ್ ಮಾಡಿದ್ದಾರೆ.....

ಉಪಾಧ್ಯಕ್ಷರು : ಕೇಸನ್ನು ವಾಪಸ್ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ ಮೇಲೆ ಮತ್ತೆ ಚರ್ಚೆ ಏತಕ್ಕೆ ಬೇಕು? ಶಾಸಕರನ್ನು ಸಂಪೂರ್ಣವಾಗಿ ಗೌರವದಿಂದ ಕಾಣಬೇಕೆಂದು ಅಧಿಕಾರಿಗಳಿಗೆ ಆದೇಶವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಈಗ ಆ ಕುರಿತ ಪ್ರಶ್ನೆಯೇ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ಸನ್ಮಾನ್ಯ ಪ್ರಕಾಶ್‌ರವರಿಂದ ಈ ರೀತಿಯ ಉತ್ತರವನ್ನು ಕೇಳುತ್ತಿರುವುದು ಬಹಳ ಆಶ್ಚರ್ಯ. ತುಂಬಾ ಸ್ಪಷ್ಟವಾಗಿ ಎಫ್‌ಐಆರ್‌ನಲ್ಲಿ ಅಕ್ರಮ ಪ್ರವೇಶ ಎಂದು ಇದೆ. ಈಗ ವಾಪಸ್ ತೆಗೆದುಕೊಳ್ಳುತ್ತಾರೆ ಎಂದು ನೀವು ಹೇಳುತ್ತೀರಿ. ಹಾಗಾದರೆ ಬರೆದವನು ಹೇಗೆ ಬರೆದ? ಎಂದು ಹೇಳಬೇಕು. ಹೀಗೆ ಬರೆದವನ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಇದಕ್ಕಿಂತ ಹೆಚ್ಚಿನ ವರದಿ ನಿಮಗೆ ಬೇಕೇ?

ಶ್ರೀ ಹೆಚ್.ಡಿ. ಬಸವರಾಜು : ಕೇಸನ್ನು ಬೇಕಾದ ಹಾಗೆ ಹಾಕಿ ವಾಪಸ್ ತೆಗೆದುಕೊಳ್ಳಬಹುದೇ? ಈ ರೀತಿಯಲ್ಲಿ ಅಧಿಕಾರಿಗಳಿಗೆ ರಕ್ಷಣೆ ಕೊಡಬೇಡಿ. ಇದು ಶಾಸಕರ ಮರ್ಯಾದೆ ಪ್ರಶ್ನೆ.

ಉಪಾಧ್ಯಕ್ಷರು : ತಾವುಗಳು ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿರಿ. ಸರಕಾರದವರು ಈಗಾಗಲೇ ಸೂಕ್ತ ಭರವಸೆಯನ್ನು ಕೊಟ್ಟಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇಲ್ಲಿ ವಿಚಾರವು ತುಂಬಾ ಸ್ಪಷ್ಟವಾಗಿ ಆಗಿದೆ. ಪ್ರಕಾಶ್‌ರವರು ಹೇಳಿದ ಹಾಗೆ ಶಾಸಕರುಗಳ ಮೇಲೆ ಮತ್ತು ಎಲ್ಲರ ಮೇಲೆ ಹಾಕಿದ ಕೇಸನ್ನು ವಾಪಸ್ಸ್ ತೆಗೆದು ಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕೇವಲ ಶಾಸಕರುಗಳ ಮೇಲಿನ ಕೇಸ್ ವಾಪಸ್ ತೆಗೆದುಕೊಳ್ಳುವುದಿಲ್ಲ. ಇಲ್ಲಿ ಹಿಂದೆ ಕೂಡ ಜಿಲ್ಲಾಧಿಕಾರಿಗಳು ಯಾವ ಯಾವ ರೀತಿಯಲ್ಲಿ ನಡೆದುಕೊಂಡಿದ್ದಾರೆ ಎಂದು ಶಾಸಕರು ಪ್ರಸ್ತಾಪ ಮಾಡಿದ್ದಾರೆ. ಮುಖ್ಯಸಚೇತಕರವರ ಕ್ಷೇತ್ರದಲ್ಲಿಯೂ ಕೂಡ ಮಾಡಿದ ಪ್ರಕರಣವನ್ನು ಹೇಳಿದ್ದಾರೆ. ನಾವು ಸುಳ್ಳು ಹೇಳುವುದಾದರೆ ಅವರನ್ನು ಕೂಡ ಕೇಳಿ. ಈ ರೀತಿಯಾಗಿ ಜಿಲ್ಲಾಧಿಕಾರಿಗಳು ತುಂಬಾ ಸ್ಪಷ್ಟವಾಗಿ ಎಫ್‌ಐಆರ್‌ನಲ್ಲಿ ಹೇಳುತ್ತಿದ್ದಾರೆ. ಅಲ್ಲಿ ಅತಿಕ್ರಮ ಪ್ರವೇಶ ನಡೆದಿದೆ ಎಂದು ಹೇಳುವಾಗ ಇನ್ನೆಂಥ ರಿಕಾರ್ಡ್ಸ್ ಇವರಿಗೆ ಬೇಕು? ಹಾಗಾದರೆ ನಾವು ಜಿಲ್ಲಾಧಿಕಾರಿಗಳ ಖಾಸಗಿ ಮನೆಗಳಿಗೆ ಹೋಗಿದ್ದೇವೆಯೇ? ಜಿಲ್ಲಾಧಿಕಾರಿಗಳ ಕಛೇರಿಯು ಅವರ ಸ್ವಂತ ಮನೆಯೇ? ಆದ್ದರಿಂದ ನೀವು ಕೇವಲ ವರದಿ ತರಿಸಿಕೊಳ್ಳುವುದಲ್ಲ, ಇದನ್ನು ಎನ್‌ಕ್ವೈರಿ ಮಾಡಬೇಕು. ಅದನ್ನು ಹೇಳಬೇಕು. ಅಲ್ಲಿರುವ ಡಿಸಿ ನಿಜಕ್ಕೂ ಸತ್ಯಹರಿಶ್ಚಂದ್ರ ಎಂದು ನೀವು ಹೇಳುವುದಾದರೆ ಖಂಡಿತ ನಾವು ಯಾರೂ ಅವರ ಸುದ್ದಿಗೆ ಬರುವುದಿಲ್ಲ. ನಮ್ಮ ಮೇಲೆ ಹಾಕಿರುವ ಕೇಸ್‌ಗಳನ್ನು ಮುಂದುವರಿಸಿ. ನಾವು ತಪ್ಪು ಮಾಡಿದ್ದರೆ, ಅತಿಕ್ರಮ ಪ್ರವೇಶ ಮಾಡಿದ್ದರೆ, ಅಕ್ರಮಕೂಟ ಮಾಡಿದ್ದರೆ, ನಮ್ಮನ್ನು ರಾಷ್ಟ್ರದ್ರೋಹಿಗಳು ಎಂದು ಗಲ್ಲಿಗೇರಿಸಿ, ಬೇಡ ಎಂದು ಹೇಳುವುದಿಲ್ಲ. ಇಲ್ಲಿ ಬಂದಿರುವ ಪ್ರಶ್ನೆ ಎಂಥಾದ್ದು ಹೇಳಿ? ಇದಕ್ಕಿಂತ ಬೇರೆ ಅವಮಾನ ಬೇಕೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಶ್ರೀಮತಿ ವರದ ಎನ್ನುವವರು ಕೊಟ್ಟ ಕಂಪ್ಲೈಂಟನ ಒಂದು ಸಾಲನ್ನು ಓದುತ್ತೇನೆ. ನಾನು ಈ ವಿಚಾರವನ್ನು ಫೋನ್ ಮಾಡಿದಾಗ ನಾನು ಅನ್ಯ ಕಡೆ ಇರುವ ಕಾರಣ ಮಾತನಾಡಲು ಸಿಗುವುದಿಲ್ಲ ಎಂದು ಶ್ರೀ ಸುಧಾಕರ್‌ರವರು ತಿಳಿಸಿದರು. ನಾನು ಈ ವಿಚಾರವನ್ನು ಶಾಸಕರಿಗೂ ಹಾಗೂ ಪಕ್ಷದ ಕಾರ್ಯಕರ್ತರಿಗೆ ತಿಳಿಸಿದಾಗ ನಮಗೆ ತಹಶೀಲ್ದಾರ್ ಹಾಗೂ ಪಡಿತರ ಅಧಿಕಾರಿಗಳು ಬೇಕೆಂದು ತಿಳಿಸಿದ ಮೇರೆಗೆ ಮಂಗಳೂರು ತಹಶೀಲ್ದಾರರನ್ನು, ಪಡಿತರ ಅಧಿಕಾರಿಗಳನ್ನು, ಆಹಾರ ಹಾಗೂ ನಾಗರೀಕ ಪೂರೈಕೆ ಅಧಿಕಾರಿಯನ್ನು ಕರೆಯಿಸಿ, ಅವರೊಂದಿಗೆ ಚರ್ಚೆ ಮಾಡಿರುತ್ತೇನೆ ಎಂದು ಅಲ್ಲ, ಅದು ಮಾಡುತ್ತೇನೆ ಎಂದು ಆಗಬೇಕು. ಹಾಗೂ ಮನವಿಯನ್ನು ಅವರ ಅನುಪಸ್ಥಿತಿಯಲ್ಲಿ ನಾನು ಸ್ವೀಕರಿಸುವುದಾಗಿ ತಿಳಿಸಿದರೂ ಕೂಡ ಅವರು ತಮಗೆ ಜಿಲ್ಲಾಧಿಕಾರಿಯವರೇ ಬೇಕೆಂದು ತಿಳಿಸಿ ಸದರಿ ಮನವಿಯನ್ನು ಗೋಡೆಗೆ ಅಂಟಿಸಿ ನಿರ್ಗಮಿಸಿದರು ಎಂದು ಇದೆ. ಅಂದರೆ ಇದರಲ್ಲಿ ಸ್ಪಷ್ಟವಾಗುವುದು ಅಂದರೆ ಯಾರೂ ಅಧಿಕಾರಿಗಳು ಬಂದಿಲ್ಲವಾದ ಕಾರಣ ಗೋಡೆಗೆ ಅಂಟಿಸಿದರು ಎಂದು ಆಗುತ್ತದೆ. ಡಿಸಿ ಯವರು ಏನು ಹೇಳುತ್ತಾರೆ ಅಂದರೆ ಕರ್ತವ್ಯದಲ್ಲಿ ನಿರತರಾಗಿದ್ದ ಪ್ರಕರಣದ ಫಿರ್ಯಾದುದಾರರು ಜಿಲ್ಲಾಧಿಕಾರಿಯವರು ಕಛೇರಿಯಲ್ಲಿ ಇಲ್ಲದೇ ಇದ್ದುದರಿಂದ ಅವರಿಗೆ ಸಮಜಾಯಿಸಿ ಹೇಳಿದರೂ ಅವರಿಗೆ ಸಮಾಧಾನವಾಗದೇ ಕೋಪೋದ್ರಿಕ್ತರಾಗಿ ಕಛೇರಿ ಕೆಲಸಕ್ಕೆ ಅಡ್ಡಿಯನ್ನು ಮಾಡಿರುವುದಾಗಿ ಶ್ರೀಮತಿ ವರದಾ, ಪ್ರಥಮದರ್ಜೆ ಸಹಾಯಕರು, ದ.ಕ. ಜಿಲ್ಲಾ ಅಧಿಕಾರಿಗಳ ಕಛೇರಿ, ಮಂಗಳೂರು - ಇವರು ತಮ್ಮ ಮೇಲಧಿಕಾರಿಗಳ ಮುಖಾಂತರ ನಿವೇದಿಸಿಕೊಂಡಿದ್ದಾರೆ. ಅಂದರೆ ಶ್ರೀಮತಿ ವರದಾರವರ ಕಂಪ್ಲೈಂಟನಲ್ಲಿ ಅದು ಇಲ್ಲ. ಆದರೆ ಡಿಸಿ ಕಲ್ಪನೆ ಮಾಡಿಕೊಂಡು ಅದನ್ನು

ಬರೆಯುತ್ತಾರೆ. ಈ ರೀತಿಯಾಗಿ ಜಿಲ್ಲಾಧಿಕಾರಿಗಳನ್ನು ಸಸ್ಪೆನ್‌ಷನಲ್ಲಿಟ್ಟು ಎನ್‌ಕ್ವೈರಿ ಮಾಡುವುದರಿಂದ ಇತರ ಅಧಿಕಾರಿಗಳು ತಪ್ಪು ಗ್ರಹಿಕೆ ಮಾಡಿಕೊಳ್ಳಬಹುದೆಂದು ಕಾಣುವ ಕೇಸ್ ಇದಲ್ಲ. ಒಬ್ಬ ಗೌರವಾನ್ವಿತ ಜನಪ್ರತಿನಿಧಿಗಳ ಜೊತೆಗೆ ಯಾವ ರೀತಿಯಲ್ಲಿ ನಡೆದುಕೊಳ್ಳಬೇಕಾಗಿತ್ತೋ ಆ ರೀತಿಯಾಗಿ ಅಧಿಕಾರಿ ನಡೆದುಕೊಂಡಿಲ್ಲ. ಹಿಂದಿನ ದಿನವೇ ಇವರಿಗೆ ಕಾರ್ಯಕ್ರಮ ಗೊತ್ತಿತ್ತು. ಮಾಜಿ ಪ್ರಧಾನಿಯವರನ್ನು ನೋಡಲು ಹೋಗುವಾಗ ಕಾರಿನಿಂದ ಇಳಿದು ಕುಳಿತವರೊಂದಿಗೆ ಮಾತನಾಡುವ ಗೌರವವನ್ನು ತೋರಿಸಿಲ್ಲ. ಹೀಗೆ ಈ ಎಲ್ಲಾ ಅಪರಾಧಗಳನ್ನು ಅವರು ಮಾಡಿದ್ದು. ಇದಾದ ಮೇಲೆ ಪುನಃ ಸುಳ್ಳು ಕೇಸನ್ನು ಶಾಸಕರ ಮೇಲೆ ಹಾಕುತ್ತಾರೆ ಎನ್ನುವುದಾದರೆ ಇದರಿಂದ ಶಾಸಕರಿಗೆ ಅಪಮಾನವಾಗುವುದಿಲ್ಲವೆ? ಆದ್ದರಿಂದ, ದಯಮಾಡಿ ಸಸ್ಪೆಂಡ್ ಮಾಡಿ ಎನ್‌ಕ್ವೈರಿ ಮಾಡಿಸಿ ಎಂದು ಹೇಳುತ್ತಾ ಇದ್ದೇವೆ. ಅದು ಆಗದಿದ್ದರೆ ನಮ್ಮ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸರಕಾರದವರು ದಯಮಾಡಿ ಹೀಗೆ ಮಾಡಲಿ. ಆ ಅಧಿಕಾರಿ ಅಲ್ಲಿ ಇದ್ದರೆ ಈ ವಿಚಾರಣೆಗೆ ಗೌರವ ಬರುವುದಿಲ್ಲ. ಈ ರೀತಿಯಾಗಿ ಜಿಲ್ಲಾಧಿಕಾರಿ ಅಲ್ಲಿದ್ದಾಗ ಈ ತರಹ ಎನ್‌ಕ್ವೈರಿಗಳು ಸರಿಯಾಗಿ ನಡೆಯಲು ಸಾಧ್ಯವೆ? ನಾವು ಸಸ್ಪೆಂಡ್ ಮಾಡಿ ಎಂದು ಕೇಳುತ್ತಿದ್ದೇವೆ. ನಾವು ಕೂಡ ಜವಾಬ್ದಾರಿಯುತ ಸ್ಥಾನದಲ್ಲಿದ್ದೇವೆ. ಇದು ಅವಮಾನ, ಇದನ್ನು ಸರಕಾರ ಮಾಡಲು ತಯಾರಿಲ್ಲ ಎಂದು ಹೇಳುವುದಾದರೆ, ಕೊನೆಯ ಪಕ್ಷ ಆ ಮನುಷ್ಯನನ್ನು ವರ್ಗಾವಣೆ ಮಾಡಿಸಿ ಎನ್‌ಕ್ವೈರಿ ಮಾಡಿಸಿ. ಒಂದು ವೇಳೆ ಅವರ ತಪ್ಪು ಇಲ್ಲವಾದಲ್ಲಿ ಪುನಃ ಅಲ್ಲಿಗೇ ಕಳುಹಿಸಿ. ನಾವು ನಿಮ್ಮನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಲು ಹೋಗುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ಅಲ್ಲಿ ಮೂರು ಜನ ಶಾಸಕರು ಕಛೇರಿಗೆ ಹೋಗಿ ಜಿಲ್ಲಾಧಿಕಾರಿ ಬರಲಿಲ್ಲ, ತಹಶೀಲ್ದಾರ್ ಬರಲಿಲ್ಲ ಎಂದು ಕಂಬಕ್ಕೆ ತಮ್ಮ ಮನವಿಪತ್ರವನ್ನು ಅಂಟಿಸಿದರೆ ನೀವು ಸೆಕ್ಷನ್ 143, 147, 448, 353, 149 ಮುಂತಾಗಿ ಎಲ್ಲಾ ಕೇಸ್‌ಗಳನ್ನು ಹಾಕುತ್ತೀರಿ. ಡಿಸೆಂಬರ್ 11ನೇ ತಾರೀಖು 1994ರಂದು ವಿಧಾನಸೌಧಕ್ಕೆ ನುಗ್ಗಿ ತ್ರಿವರ್ಣ ಧ್ವಜವನ್ನು ತೆಗೆದಿದ್ದಾರಲ್ಲ? ಅವರ ಮೇಲೆ ಏನು ಚಾರ್ಜ್‌ನ್ನು ನೀವು ಹಾಕಿದ್ದೀರಿ? ಮೂರು ಜನ ಶಾಸಕರುಗಳು ಹೋಗಿ ಮನವಿಯನ್ನು ಕಂಬಕ್ಕೆ ಅಂಟಿಸಿದ್ದಕ್ಕೆ ಈ ಚಾರ್ಜ್‌ಗಳು? ವಿಧಾನಸೌಧ ಈ ರಾಜ್ಯದ ಆಡಳಿತದ ಒಂದು ಕೇಂದ್ರ ಸ್ಥಳ, ಅದರ ಮೇಲೆ ಹತ್ತಿ ತ್ರಿವರ್ಣ ಧ್ವಜವನ್ನು ತೆಗೆದಿದ್ದಾರಲ್ಲ? ಅವರ ಮೇಲೆ ಏನು ಕೇಸನ್ನು ಹಾಕಿದ್ದೀರಿ ಅವೊತ್ತು?

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ನಾವು ಅದನ್ನು ಡಿಫೆಂಡ್ ಮಾಡಿಲ್ಲ. ಅಲ್ಲಿ ಶಾಸಕರಿಗೆ ಆಗಿರತಕ್ಕ ಅಸೌಜನ್ಯತೆಯ ಬಗ್ಗೆ ಮುಕ್ತ ಮನಸ್ಸಿನಿಂದ ನಾವು ಹೇಳಿದ್ದೇವೆ ಮತ್ತು ಕೇಸನ್ನು ವಾಪಸ್ ತೆಗೆದುಕೊಳ್ಳುವುದಾಗಿ ತಿಳಿಸಿದ್ದೇವೆ. ತಾವುಗಳೆಲ್ಲ ಹೋರಾಟ ಮಾಡತಕ್ಕ ಜನ ಇದನ್ನು ನಿರೀಕ್ಷೆ ಮಾಡದಿರಲು ಆಗುತ್ತದೆಯೇ?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಹಿರಿಯ ಸಚಿವರಾದ ತಾವು ನಮ್ಮನ್ನು ಇನ್‌ಸಲ್ಟ್ ಮಾಡುತ್ತಿದ್ದೀರಿ. ನಾವು ಈ ಕೇಸ್‌ಗೆ ಹೆದರುವವರಲ್ಲ. ಲಾಟಿ ಚಾರ್ಜ್‌ಗೆ ಹೆದರುವವರಲ್ಲ.

ಏರೋಪ್ಲೇನ್‌ಗೆ ಹೆದರಿದವರಲ್ಲ. ಯಾವುದಕ್ಕೂ ಹೆದರಿದವರಲ್ಲ. ಆದರೆ ಒಬ್ಬ ಜಿಲ್ಲಾಧಿಕಾರಿ ಎಷ್ಟು ಉದ್ಧಟತನವನ್ನು ತೋರಿಸುತ್ತಾರೆ ಎಂಬುದಕ್ಕೆ ಇದು ಸಾಕ್ಷಿ. ಇದೇ ಪ್ರಶ್ನೆ ಇಲ್ಲಿರುವುದು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಹೆದರತಕ್ಕವರು ಶಾಸಕರಾಗಿ ಇಲ್ಲಿಗೆ ಬರುವುದಕ್ಕಾಗುವುದಿಲ್ಲ. ಈ ರೀತಿ ಜನಪರವಾಗಿ ಹೋರಾಟವನ್ನು ಮಾಡುವಾಗ ಇಂಥ ಅಡ್ಡಿ ಆತಂಕಗಳು ಬಂದೇ ಬರುತ್ತದೆ, ಇದರ ವಿರುದ್ಧವಾಗಿ ನಾವೆಲ್ಲರೂ ಯೋಚನೆಯನ್ನು ಮಾಡಿಯೇ ಇರುತ್ತೇವೆ. ಅವರು ಸೌಜನ್ಯದಿಂದ ನಡೆಲಿಲ್ಲವೆಂಬುದು ನಮಗೆ ಗೊತ್ತಾಗಿದೆ. ನಾವು ಅದಕ್ಕಾಗಿ ಕೇಸನ್ನು ವಾಪಸ್ ತೆಗೆದುಕೊಳ್ಳುತ್ತೇವೆ. ವಿಭಾಗಾಧಿಕಾರಿಗಳ ಮೂಲಕ ನಾವು ವರದಿಯನ್ನು ತೆಗೆದುಕೊಂಡು ನಾವು ಮುಂದಿನ ಕ್ರಮವನ್ನು ಮುಖ್ಯಮಂತ್ರಿಗಳ ಜೊತೆ ಮಾತನಾಡಿ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಈ ನಿಲುವಳಿ ಸೂಚನೆಯ ಬಗ್ಗೆ ಈಗಾಗಲೇ ಮಾನ್ಯ ಯಡಿಯೂರಪ್ಪನವರು, ಈಶ್ವರಪ್ಪನವರು, ವಾಟಾಳ್ ನಾಗರಾಜ್‌ರವರು ಮತ್ತು ಇತರೆ ಮಿತ್ರರುಗಳು ಮಾತನಾಡಿದ್ದಾರೆ. ಆ ರೀತಿ ಅವರುಗಳೆಲ್ಲರೂ ಪ್ರಸ್ತಾಪ ಮಾಡಿರುವ ಉದ್ದೇಶವಾದರೂ ಏನು? ದಕ್ಷಿಣ ಕನ್ನಡದಲ್ಲಿ ರಾಜ್ಯಸರ್ಕಾರದ ವೈಫಲ್ಯತೆಯ ಬಗ್ಗೆ ಅಲ್ಲಿನ ಶಾಸಕರುಗಳು ಪ್ರತಿಭಟನೆ ಮಾಡುವಾಗ ಮತ್ತು ಅವರು ಕೊಡಲು ಹೋಗಿದ್ದ ಮನವಿಯನ್ನು ಡೆಪ್ಯುಟಿ ಕಮೀಷನರ್‌ರವರು ಸ್ವೀಕಾರ ಮಾಡಲಿಲ್ಲ, ಇವರುಗಳು ಪ್ರತಿಭಟನೆ ಮಾಡುತ್ತಿದ್ದ ಪಕ್ಕದಲ್ಲೇ ಡೆಪ್ಯುಟಿಕಮೀಷನರ್‌ರವರು ಹೋದರೂ ಆ ಕಡೆ ನೋಡಲಿಲ್ಲವೆಂದು ಹೇಳಿದ್ದಾರೆ. ಎಫ್.ಐ.ಆರ್.ನಲ್ಲಿ ಹಾಕಿರುವ ಎಲ್ಲಾ ಸೆಕ್ಷನ್‌ಗಳ ಬಗ್ಗೆ ತಮಗೆ ಗೊತ್ತಿದೆ. ಮೊದಲನೆಯದಾಗಿ ಜಿಲ್ಲಾಧಿಕಾರಿಯವರು ಈ ರೀತಿಯಾಗಿ ಮಾಡಲೇಬಾರದು. ಶಾಸಕರೇ ಆಗಲಿ, ಜನಸಾಮಾನ್ಯರೇ ಆಗಲಿ, ಮನವಿ ಪತ್ರವನ್ನು ಕೊಡುವಾಗ ಡೆಪ್ಯುಟಿ ಕಮೀಷನರ್‌ರವರು ಗೌರವದಿಂದ ಅವರುಗಳನ್ನು ಕಾಣಬೇಕು, ಮಾತನಾಡಿಸಬೇಕು. ಅದು ಜಿಲ್ಲಾಧಿಕಾರಿಯವರ ಮತ್ತು ಪೋಲೀಸ್ ವರಿಷ್ಟರುಗಳ ಕರ್ತವ್ಯ. ಯಾರು ಮನವಿಪತ್ರವನ್ನು ಕೊಡುತ್ತಾರೋ ಅದನ್ನು ತೆಗೆದುಕೊಂಡು, ಅವರನ್ನು ಸಮಾಧಾನಪಡಿಸಿ, ಸಮಸ್ಯೆಗಳಿದ್ದರೆ ಅದನ್ನು ನಿವಾರಣೆ ಮಾಡುವ ಪ್ರಯತ್ನವನ್ನು ಆ ಉನ್ನತ ಅಧಿಕಾರಿಗಳು ಮಾಡಬೇಕು. ಆದರೆ ಇಲ್ಲಿ ಅದಕ್ಕೆ ವಿರುದ್ಧವಾಗಿ ಸರ್ಕಾರವನ್ನೇ ಇಕ್ಕಟ್ಟಿಗೆ ಸಿಕ್ಕಿಸತಕ್ಕ ಸ್ಥಿತಿಯನ್ನು ನಿರ್ಮಾಣ ಮಾಡಿದರೆ ಹೇಗೆ? ಆ ಭಾಗದ ಪ್ರಮುಖವಾದ ಪತ್ರಿಕೆ ಉದಯವಾಣಿ ಎಂಬುದು ತಮಗೂ ಗೊತ್ತಿದೆ. ಅದನ್ನು ನಾನು ತರಿಸಿ ನೋಡಿದೆ. ಅಲ್ಲಿ ಜನರಾಗಲಿ, ಶಾಸಕರಾಗಲಿ ಸರ್ಕಾರಿ ವಸ್ತುಗಳನ್ನು ನಾಶ ಮಾಡುವ ಕೆಲಸ ಮಾಡುತ್ತಿದ್ದರೆ ಎಲ್ಲಾ ಪತ್ರಿಕೆಗಳಲ್ಲೂ ವಿಷಯ ಬಂದು ಬಿಡುತ್ತಿತ್ತು. ನಾನು ಅಲ್ಲಿನ ಸ್ಥಳೀಯ ಪತ್ರಿಕೆಯಾದ ಉದಯವಾಣಿಯನ್ನು ತರಿಸಿ ನೋಡಿದೆ, ಆದರೆ ಅದರಲ್ಲಿ ಆ ವಿಚಾರದಲ್ಲಿ ಯಾವುದೇ ಮಾಹಿತಿ ಇರಲಿಲ್ಲ. ಜನರು ಮನವಿ ಪತ್ರವನ್ನು ಕೊಡಲು ಹೋಗಿದ್ದರು, ಅದರಲ್ಲಿ ಶಾಸಕರು ಮತ್ತು ಆ ಪಕ್ಷದ ಮೋರ್ಚಾದ ನಾಯಕರುಗಳು ಇದ್ದರು ಎಂದು ಮಾತ್ರ ವರದಿ ಇದೆ. ಕಲ್ಲನ್ನು ಹೊಡೆದಿದ್ದಾಗಲಿ, ಕಛೇರಿಯ ಒಳಕ್ಕೆ ನುಗ್ಗಿದ್ದಾಗಲಿ, ಕಾನೂನುಬಾಹಿರವಾದ ಯಾವುದೇ ಕೆಲಸವನ್ನಾಗಲಿ ಮಾಡಿಲ್ಲವೆನ್ನತಕ್ಕದ್ದು ಸ್ಪಷ್ಟವಾಗಿದೆ. ಇಷ್ಟೊಂದು ಶಾಂತಯುತವಾಗಿ ನಡೆದಂಥ ಪ್ರತಿಭಟನೆಯ ಬಗ್ಗೆ ಪ್ರಚೋದನೆ ಮಾಡತಕ್ಕ ರೀತಿಯಲ್ಲಿ ಎಫ್.ಐ.ಆರ್ ಏಕೆ ಬಂತು? ಅದರ ಹಿನ್ನೆಲೆಯೇನು ಎಂಬ ಬಗ್ಗೆ ತಾವು ಯೋಚನೆ

ಮಾಡಬೇಕು? ಶಾಸಕರಿಗೇ ಈ ರೀತಿಯಾದರೆ ಹೇಗೆ? ನಾಳೆ ಬೇರೆ ಬೇರೆ ಕಡೆ ಬೇರೆ ಬೇರೆ ಕಾರಣಗಳಿಗಾಗಿ ಅನೇಕರು ಪ್ರತಿಭಟನೆ ಮಾಡಬೇಕಾಗಿಬರಬಹುದು, ವಿರೋಧ ಪಕ್ಷದವರೂ ಮಾಡುತ್ತಾರೆ, ತಮ್ಮ ಪಕ್ಷದವರು ಸಹ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡುವುದಾಗಿ ನಿನ್ನೆ ದೆಹಲಿಯಲ್ಲಿ ರೆಸಲ್ಯುಷನ್ ಮಾಡಿದ್ದೀರಿ. ತಮಗೆ ನಾಳೆ ಇದೇ ರೀತಿ ಕಾಣಬೇಕೆ? ಆದ್ದರಿಂದ ಯಾವುದೇ ಶಾಸಕರಾಗಲಿ ಅವರ ಪ್ರತಿಭಟನೆಯನ್ನು ಅರ್ಜಿಯ ಮೂಲಕ ಸೂಚಿಸುವಾಗ ಅದನ್ನು ತೆಗೆದುಕೊಂಡು ಗೌರವದಿಂದ ಅವರನ್ನು ಕಾಣಬೇಕೆಂದು ಜಿಲ್ಲಾಧಿಕಾರಿಯವರಿಗೆ ಸುತ್ತೋಲೆಯೊಂದನ್ನು ಕಳುಹಿಸಿಕೊಡಿ. ಈಗಾಗಲೇ ಆ ರೀತಿಯಾದ ಸುತ್ತೋಲೆ ಇದೆ. ಆದರೆ ಅವರು ಆ ಕೆಲಸ ಮಾಡುವುದನ್ನು ಬಿಟ್ಟು ಎಫ್.ಐ.ಆರ್. ಹಾಕತಕ್ಕ ಕೆಲಸ ಮಾಡಿದರೆ ಹೇಗೆ? ತಾವು ಅದನ್ನು ವಿಥ್‌ಡ್ರಾ ಮಾಡಿಕೊಳ್ಳುವುದಾಗಿ ಹೇಳಿದ್ದೀರಿ. ಆದರೆ ತಾವು ಅದರ ಜೊತೆಗೆ ಡಿವಿಜನಲ್ ಕಮೀಷನರ್‌ರವರಿಂದ ಇಲಾಖಾ ವಿಚಾರಣೆಯನ್ನು ಮಾಡಿಸಿ. ತಾವು ಆ ರೀತಿ ಮಾಡಿದ್ದೇ ಆದರೆ ಸರ್ವೇ-ಸಾಮಾನ್ಯವಾಗಿ ತಾವು ಕ್ರಮ ತೆಗೆದುಕೊಳ್ಳಲೇ ಬೇಕಾಗುತ್ತದೆ. ವಿಭಾಗಾಧಿಕಾರಿಯುವರು, ರೆವಿನ್ಯೂ ಕಮೀಷನರ್, ಮುಖ್ಯಕಾರ್ಯದರ್ಶಿಯವರಿಂದ ಇದರ ಬಗ್ಗೆ ವಿಚಾರಣೆ ಮಾಡಬೇಕೆಂದರೆ ತಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆ ಜಿಲ್ಲಾಧಿಕಾರಿಯವರು ಮಾಡಿರುವ ಎಫ್.ಐ.ಆರ್. ಸರಿಯಲ್ಲವೆಂದು ತಾವು ಅಲ್ಲಗಳೆದಿರುವಾಗ you direct the Chief Secretary or the Revenue Commissioner to institute an enquiry and pending enquiry you have to take action.ಆದರೆ ತಾವೇನು ಇದನ್ನು ವಿಥ್‌ಡ್ರಾ ಮಾಡಿಕೊಳ್ಳುತ್ತೇವೆಂದು ಹೇಳುತ್ತಿದ್ದೀರಲ್ಲ ಇದರಿಂದ ಈ ಶಾಸಕರಿಗೆ ಕೇವಲ ಸಮಾಧಾನಗೊಳಿಸುವ ತಂತ್ರವಾಗುತ್ತದೆ. ಇಲ್ಲದಿದ್ದರೆ ಈ ವಿಚಾರವನ್ನು ಇಲ್ಲಿಗೇ ಮುಗಿಸಬೇಕು ಎಂಬ ದೃಷ್ಟಿಯಿಂದ ಆ ಕ್ರಿಮಿನಲ್ ಕೇಸನ್ನು ವಿಥ್‌ಡ್ರಾ ಮಾಡಿಕೊಂಡಂತೆ ಆಗುತ್ತದೆ. ಯಾವುದೇ ಅಧಿಕಾರಿಗಳಿಗೆ ತಪ್ಪು ಮಾಡಿದರೆ ನನಗೆ ಶಿಕ್ಷೆಯಾಗುತ್ತದೆ ಎಂಬ ಭಾವನೆ ಬರದಿದ್ದರೆ ನಾಳೆ ತಮಗೂ ಗೌರವವನ್ನು ಕೊಡುವುದಿಲ್ಲ, ಇನ್ನು ಜನಸಾಮಾನ್ಯರಿಗಂತೂ ಇನ್ನೂ ದೂರವೇ ಆಗುತ್ತದೆ. ಆದ್ದರಿಂದ ಇದರ ಬಗ್ಗೆ ಮತ್ತೆ ಪರಿಶೀಲನೆ ಮಾಡಿ, ಇಲ್ಲಿ ವಿಚಾರಣೆಯನ್ನು ಮಾಡುವುದು ಅಗತ್ಯತೆ ಇದೆಯೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರದ ನಿಲುವನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಾದ ಪ್ರಕಾಶ್‌ರವರು ಸ್ಪಷ್ಟವಾಗಿ ಹೇಳಿದ್ದಾರೆ. ಇದರ ಬಗ್ಗೆ ನಾನು ಹೆಚ್ಚು ಹೇಳುವ ಅಗತ್ಯವಿಲ್ಲ. ಮಾನ್ಯ ಬಿ.ಜೆ.ಪಿ. ಸದಸ್ಯರು ದಯಮಾಡಿ ಧರಣಿಯನ್ನು ನಿಲ್ಲಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಾವುಗಳು ಇನ್ನು ಧರಣಿ ಮಾಡುವುದಿಲ್ಲ, ಮಾಡಲೇಬೇಕೆಂದರೆ ಸಭೆಯಿಂದ ಹೊರಕ್ಕೆ ಹೋಗುತ್ತೇವೆಯೇ ಹೊರತು ಬೇರೆ ಮಾಡುವುದಿಲ್ಲವೆಂದು ಮೊನ್ನೆ ಅವರುಗಳು ಹೇಳಿದ್ದರು. ಆದ್ದರಿಂದ ಇದನ್ನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಪ್ರಕಾಶ್‌ರವರು ಒಂದು ಹಂತದಲ್ಲಿ ಇದನ್ನು ಅರ್ಥ ಮಾಡಿಕೊಂಡು ಹೇಳಿಕೆಯನ್ನು ನೀಡಿದ್ದಾರೆ. ಆದರೆ ಮಾನ್ಯ ಸಿಂಧ್ಯರವರು ಹೇಳುತ್ತಿರುವುದನ್ನು

ನೋಡಿದರೆ ಅದಕ್ಕೆ ತದ್ವಿರುದ್ಧವಾಗಿರುವಂತೆ ಕಾಣುತ್ತದೆ. ಇದು ಪಕ್ಷದ ಕಾರ್ಯಕ್ರಮವಲ್ಲ. ಈ ಸದನದ ಎಲ್ಲಾ ಶಾಸಕರುಗಳಿಗೂ ಇದು ಆಗುತ್ತದೆ. ಮುಖ್ಯ ಕಾರ್ಯದರ್ಶಿಯವರಿಂದ ಇದರ ಬಗ್ಗೆ ತನಿಖೆಗೆ ಕೂಡಲೇ ಆಜ್ಞೆಯೊಂದನ್ನು ಹೊರಡಿಸಬೇಕು.

ಉಪಾಧ್ಯಕ್ಷರು : ಅವರು ಏನನ್ನೂ ಹೇಳಿಯೇ ಇಲ್ಲ, ಅವರು ಮಾತನಾಡಲು ಅವಕಾಶ ಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರಿಗಾಗಲಿ, ವಾಟಾಳ್ ನಾಗರಾಜ್‌ರವರಿಗಾಗಲಿ, ರೈತಸಂಘದ ಪುಟ್ಟಣ್ಣಯ್ಯನವರನ್ನಾಗಲಿ ರೆಫರೆನ್ಸ್ ಮಾಡಿ ನಾನು ಹೇಳಲಿಲ್ಲ. ಕಳೆದ15 ದಿವಸಗಳ ಹಿಂದೆ ಬಿಜೆಪಿ ಮಿತ್ರರುಗಳಾದ ಮಾನ್ಯ ಯಡಿಯೂರಪ್ಪನವರು, ಈಶ್ವರಪ್ಪನವರು ನಾವುಗಳು ಧರಣಿ ಮಾಡುವುದಿಲ್ಲ, ಜವಾಬ್ದಾರಿಯಿಂದ ನಡೆದುಕೊಳ್ಳುತ್ತೇವೆಂದು ಹೇಳಿದ್ದರು. ಅದನ್ನು ಇಲ್ಲಿ ಜ್ಞಾಪಿಸಿದೆ ಅಷ್ಟೆ. ನಾನು ಆಡಳಿತ ಪಕ್ಷದ ಸದಸ್ಯನಾಗಿದ್ದಂಥ ಸಂದರ್ಭದಲ್ಲಿ ವಿರೋಧ ಪಕ್ಷದಲ್ಲಿ ಇದ್ದಂಥ ಸಂದರ್ಭದಲ್ಲಿ ಒಬ್ಬರು ಅಸಿಸ್ಟೆಂಟ್ ಕಮೀಷನರ್‌ರವರು ನನ್ನ ಬಗ್ಗೆ ಸರಿಯಾಗಿ ನಡೆದುಕೊಳ್ಳಲಿಲ್ಲವೆಂದು ನಾನೇ ಇಲ್ಲಿ 1986-87ರಲ್ಲಿ ಧರಣಿ ಮಾಡಿದ್ದೇನೆ.

6.20 ಪಿ.ಎಂ.

ಈಗ ನಾವು ಒಪ್ಪಿಕೊಂಡಿದ್ದೇವೆ, ಹಾಕಿರತಕ್ಕಂಥ ಕೇಸುಗಳನ್ನು ವಿತ್‌ಡ್ರಾ ಮಾಡಬೇಕೆಂದು ಹೇಳಿದ್ದೇವೆ. ಡಿವಿಜನಲ್ ಕಮೀಷನರ್ ಮತ್ತು ರೆವಿನ್ಯೂ ಕಮೀಷನರ್‌ಗಳು ಬಹುತೇಕ ಒಂದೇ ರ್‍ಯಾಂಕಿನ ಅಧಿಕಾರಿಗಳು. ಅವರು ಅದನ್ನು ತಿಳಿದುಕೊಂಡು ನಮಗೆ ವರದಿ ಕಳುಹಿಸಿಕೊಡುತ್ತಾರೆನ್ನುವ ಮಾತನ್ನು ಸಹ ಒಪ್ಪಿದ್ದೇವೆ. ಇದರಲ್ಲಿ ಒಂದೇ ಒಂದು ವಿಚಾರವನ್ನು ಹೇಳಲು ನಾನು ಎದ್ದು ನಿಂತಿದ್ದೇನೆ. ಏನೆಂದರೆ, ಮಾನ್ಯ ಎಂ.ಪಿ. ಪ್ರಕಾಶ್‌ರವರು ಇದರ ಬಗ್ಗೆ ಹೇಳಿರುವುದು ಬಿಟ್ಟು ಒಂದು ಗೆರೆ ಸಹ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಅವರು ಏನು ಹೇಳಿದ್ದಾರೆ, ಅದನ್ನು ಒಪ್ಪಿದ್ದೇವೆ. ಈಗ ಸರ್ಕಾರ ನಡೆಸುತ್ತಿರುವವರು ನಾವು. ಯಾರನ್ನೋ ಡಿಫೆಂಡ್ ಮಾಡುವುದಕ್ಕೋಸ್ಕರ ನಾವು ಇಲ್ಲಿ ಕುಳಿತಿಲ್ಲ. ನಾವೂ ಚುನಾಯಿತರಾದ ಜನರೇ, ಕರ್ನಾಟಕವನ್ನು ಆಳಬೇಕೆಂದು ನಮಗೆ ಜನರು ಆದೇಶ ಕೊಟ್ಟಿದ್ದಾರೆ, ಆದುದರಿಂದ, ನಾವು ಆಡಳಿತ ನಡೆಸುತ್ತಿದ್ದೇವೆ. ನಾವು ಒಬ್ಬ ಜಿಲ್ಲಾಧಿಕಾರಿಯನ್ನು ಒಬ್ಬ ಎಸ್.ಪಿ. ಯನ್ನು, ಒಬ್ಬ ಜಾಯಿಂಟ್ ಡೈರೆಕ್ಟರ್ ಅನ್ನು ಒಬ್ಬ ಡೈರೆಕ್ಟರ್ ಅನ್ನು ಪೋಸ್ಟಿಂಗ್ ಮಾಡಬೇಕಾದರೆ ಬಹಳಷ್ಟು ವಿಚಾರ ಮಾಡಿದ ನಂತರವೇ ಮಾಡಿರುತ್ತೇವೆ. ಇದು ಬಹಳ ಮುಖ್ಯವಾದ ವಿಚಾರ. ಮಾನ್ಯ ಶಾಸಕರುಗಳಿಗೆ ಆಗಿರುವ ಅವಮಾನವೇನಿದೆ, ಇದು ಖಂಡನೆಗೆ ಅರ್ಹವಾಗಿರುವುದರಿಂದ ಪ್ರಶ್ನಾತೀತವಾಗಿದೆ. ನಿಮಗೆ ಅವಮಾನವಾದರೂ ಒಂದೇ, ನಮಗೆ ಅವಮಾನವಾದರೂ ಒಂದೇ. ಈ ಸಂದರ್ಭದಲ್ಲಿ ನಾವು ಒಂದು ವಿಚಾರ ತಿಳಿಸಬೇಕಾಗುತ್ತದೆ. ಜನರಿಗೋಸ್ಕರ ನಾವು ಆಡಳಿತ ನಡೆಸಬೇಕಾಗುತ್ತದೆ, ಯಾರು ಯಾವ ರೀತಿ ಇರಬೇಕೆನ್ನುವುದನ್ನು ತೀರ್ಮಾನಿಸುವವರು ನಾವು. ಆದುದರಿಂದ, ಬಹಳಷ್ಟು ವಿಚಾರ ಇದರಲ್ಲಿರುತ್ತದೆ. ತಾವು ಏನು ಹೇಳಿದ್ದೀರಿ, ಇದರ ಬಗ್ಗೆ ವಿಚಾರಣೆ ಮಾಡುತ್ತೇವೆ. ಈ ಪ್ರಕರಣವನ್ನು ತಾವು ದಯವಿಟ್ಟು ಮುಂದೆ ಎಳೆಯುವುದಕ್ಕೆ ಹೋಗಬೇಡಿ, ತಾವು ಹೇಳಿರುವುದನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. ನಾವು ಆತ್ಮಸಾಕ್ಷಿಯಿಂದ ಹೇಳುತ್ತಿದ್ದೇವೆ. ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ, ನೀವು ಈಗ ಧರಣಿಯನ್ನು ನಿಲ್ಲಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ನಾವು ನಿಮಗೆ ಹೆಚ್ಚು ಒತ್ತಾಯಿಸುವುದಿಲ್ಲ. ನಮ್ಮ ಬೇಡಿಕೆ ಇಷ್ಟೇ, ದಯಮಾಡಿ ಡಿವಿಜನಲ್ ಕಮೀಷನರ್ ಅವರಿಂದ ಎನ್‌ಕ್ವೈರಿ ಮಾಡಿಸಿ, ಎರಡನೆಯದಾಗಿ ಅಲ್ಲಿಯವರೆವಿಗೂ ಅವರನ್ನು ಬೇರೆಡೆಗೆ ವರ್ಗಾವಣೆ ಮಾಡಿ. ಅವರು ಅಲ್ಲಿದ್ದರೆ ಪ್ರಾಮಾಣಿಕವಾಗಿ ಎನ್‌ಕ್ವೈರಿ ಆಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ನಾವು ಅತ್ಯಂತ ಗೌರವದಿಂದ ಹಿರಿಯ ಸದಸ್ಯರುಗಳಿಗೆ ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತಿದ್ದೇವೆ. ಈಗ ವರ್ಗಾವಣೆ, ಮುಂತಾದವುಗಳ ಬಗ್ಗೆ ತತ್‌ಕ್ಷಣದಲ್ಲಿ ಸರ್ಕಾರ ನಿರ್ಧಾರ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಸದನದಲ್ಲಿ ಅನೇಕ ವಿಷಯಗಳು ಪ್ರಸ್ತಾಪಿಸಲ್ಪಡುತ್ತದೆ. ಹಾಗೆ ಪ್ರಸ್ತಾಪಿಸಲ್ಪಟ್ಟ ಕೂಡಲೇ ಸರ್ಕಾರ ಅದಕ್ಕೆ ಪ್ರತಿಕ್ರಿಯಿಸಬೇಕೆಂದೇನೂ ಇಲ್ಲ. ತಾವು ಈ ಸ್ಥಾನದಲ್ಲಿದ್ದಾಗ ಈ ವಿಚಾರ ಮಾಡಬೇಕಾಗುತ್ತದೆ. ಆದುದರಿಂದ ತಾವು ಏನು ಹೇಳಿದ್ದೀರಿ, ವರದಿಯನ್ನು ಮೊದಲು ತರಿಸಿಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ನೀವು ರಿಪೋರ್ಟ್ ಅನ್ನು ತರಿಸಿಕೊಂಡ ನಂತರ ಕ್ರಮಕೈಗೊಳ್ಳುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದೀರಿ. ಆದರೆ, ನಮ್ಮ ವಿರೋಧ ಪಕ್ಷದ ನಾಯಕರು ಏನು ಹೇಳಿದರೆಂದರೆ, ರಿಪೋರ್ಟ್ ಮೇಲೆ ಬರುವುದಿಲ್ಲ, ನೀವು ಒಂದು ಎನ್‌ಕ್ವೈರಿಯನ್ನು ಇನ್‌ಸ್ಟಿಟ್ಯೂಟ್ ಮಾಡಿದರೆ ಅದರ ವರದಿಯ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎಂಬುದು. ಏಕೆಂದರೆ, ವಿಶೇಷವಾಗಿ ನಾವು ಕಾಣುವಂತಹ ವಸ್ತುಸ್ಥಿತಿ ಏನೆಂದರೆ, ಅಲ್ಲಿ ಪ್ರತ್ಯಕ್ಷದರ್ಶಿಯಾದ ಹೆಣ್ಣುಮಗಳು ಆ ಸಂದರ್ಭದಲ್ಲಿ ತನ್ನ ಕಣ್ಣಿನಿಂದ ಕಂಡದನ್ನು ಏನು ಬರೆದುಕೊಟ್ಟಿದ್ದಾರೆ, ಅದು ಸತ್ಯವಾಗಿರುವುದು. ಬದಲಿಗೆ ಜಿಲ್ಲಾಧಿಕಾರಿಗಳು ಪ್ರತ್ಯಕ್ಷದರ್ಶಿಯಲ್ಲ, ಅವರು ನೋಡಿದವರೂ ಅಲ್ಲ. ಪ್ರತ್ಯಕ್ಷದರ್ಶಿಯ ಹೇಳಿಕೆಗೆ ವಿರುದ್ಧವಾಗಿ ಮತ್ತೊಂದು ಹೇಳಿಕೆಯನ್ನು ಜಿಲ್ಲಾಧಿಕಾರಿಗಳು ಮಾಡಿರುವುದು ಈಗ ದಾಖಲೆಯಲ್ಲಿದೆ, ಈಗ ಅದನ್ನು ನಾವೇನೂ ಮುಚ್ಚುಮರೆ ಮಾಡುವುದಕ್ಕಾಗುವುದಿಲ್ಲ. ಈ ರೀತಿ ತನ್ನ ಕಣ್ಣಿಗೆ ಕಾಣದಿರತಕ್ಕಂಥಾದ್ದನ್ನು ಒಂದು ಹೇಳಿಕೆ ರೂಪದಲ್ಲಿ ಕೊಟ್ಟು ಕೇಸನ್ನು ರಿಜಿಸ್ಟರ್ ಮಾಡುವುದಕ್ಕೆ ಪ್ರೈಮಾಫೇಸಿ ಬೇಕಲ್ಲ, ಪ್ರೈಮಾಫೇಸಿ ಮಾಡುವುದಕ್ಕೆ ಯಾರು ಪ್ರತ್ಯಕ್ಷದರ್ಶಿ ಇದ್ದರು, Officer incharge of that particular period, he was on duty. ಅವರ ಸಾಕ್ಷಿಗಳನ್ನು ಅಲ್ಲಗಳೆಯುವುದಕ್ಕಾಗುವುದಿಲ್ಲ. ಜಿಲ್ಲಾಧಿಕಾರಿಗಳಾದಂಥವರು ತಾನು ನೋಡದಿರತಕ್ಕಂಥ ವಿಷಯದ ಬಗ್ಗೆ ಒಬ್ಬ ಅಧಿಕಾರಿ ಕಂಡಂಥ ವಿಷಯವನ್ನು ವರದಿ ಮಾಡಿದರೂ ಕೂಡ ತದ್ವಿರುದ್ಧವಾದ ಒಂದು ಕಂಪ್ಲೈಂಟ್ ತೆಗೆದುಕೊಂಡು ಕೇಸ್ ರಿಜಿಸ್ಟರ್ ಮಾಡಿದ್ದಾರೆಂದರೆ ಕೇವಲ ಕೇಸನ್ನು ವಾಪಸ್ಸು ತೆಗೆದುಕೊಳ್ಳುವುದಷ್ಟೇ ಅಲ್ಲ, ಅವರ ನಡವಳಿಕೆಯಂತೆ ಇನ್ನೊಬ್ಬರು ವರ್ತಿಸಬಹುದು. ಇಲ್ಲದಿದ್ದರೆ, ಏನಾಗುತ್ತದೆಂದರೆ it will not give a correct message to all the concerned. ಕೆಲವು ಸಾರಿ ನಾವು ಮಾಡಲೇ ಬೇಕಾಗುತ್ತದೆ, ಬೇರೆ ಉದ್ದೇಶದಿಂದಲ್ಲ. ಒಬ್ಬ ಜಿಲ್ಲಾಧಿಕಾರಿಯಾಗಿರುವವರು, ಏಕೆಂದರೆ, ವಿಶೇಷವಾಗಿ ಜಿಲ್ಲೆಯ ಆಡಳಿತ ನೋಡಿಕೊಳ್ಳುವುದಕ್ಕೆ ಜಿಲ್ಲಾಧಿಕಾರಿಯವರನ್ನೇ ಜವಾಬ್ದಾರರನ್ನಾಗಿ ಮಾಡುವುದು. ಎಲ್ಲಾ ಪಕ್ಷದವರು ಆಡಳಿತ ನಡೆಸಿದರೂ ಅವರು ಇದ್ದೇ ಇರುತ್ತಾರೆ. ಆದರೆ, ಸತ್ಯವನ್ನು ತಮ್ಮ ಕಛೇರಿಯಲ್ಲಿದ್ದಂತಹ ಅಧಿಕಾರಿಯವರು ಹೇಳಿದ್ದನ್ನು ಬಿಟ್ಟು ಬೇರೆ ಮಾಡಬೇಕಾದಂಥ ಅಗತ್ಯವೇನಿತ್ತು?

ಶ್ರೀ ಎಂ.ಪಿ. ಪ್ರಕಾಶ್ : ಸರ್ಕಾರ ಒಪ್ಪಿಕೊಂಡ ನಂತರ ಇದರ ಬಗ್ಗೆ ಇಷ್ಟು ದೀರ್ಘವಾಗಿ ಚರ್ಚೆ ಮಾಡಬೇಕಾದಂಥ ಅಗತ್ಯ ಕೂಡ ಇರಲಿಲ್ಲ, ತಾವೂ ಕೂಡ ಸರ್ಕಾರ ನಡೆಸಿದ್ದೀರಿ. ಇಲ್ಲಿ ಸರ್ಕಾರವನ್ನು ನಡೆಸುವಂಥ ಸನ್ನಿವೇಶದಲ್ಲಿ ಸತ್ಯಾಸತ್ಯತೆ ವಿಚಾರಗಳನ್ನೆಲ್ಲಾ ವಿಚಾರ ಮಾಡಿ ಅಲ್ಲಿಂದ ವರದಿ ತರಿಸಿಕೊಳ್ಳುತ್ತೇವೆ, ಅಂದ ತಕ್ಷಣ ಶಾಸಕರುಗಳನ್ನು ನಂಬಿಲ್ಲವೆಂಬ ಮಾತಲ್ಲ, ನಾವು ಶಾಸಕರನ್ನು ಅತ್ಯಂತ ಗೌರವದಿಂದ ಕಾಣುತ್ತೇವೆ. ಆದರೂ ಕೂಡ ಕೆಲವು ನಿಯಮಾವಳಿ, ಪದ್ಧತಿಗಳ ಪ್ರಕಾರ ಸರ್ಕಾರವನ್ನು ನಡೆಸಬೇಕಾಗುತ್ತದೆ. ಒಂದು ಬೇಡಿಕೆ ಒಂದು ಕಡೆ ಬಂದ ನಂತರ ನಾವು ನಿರ್ಧಾರ ತೆಗೆದುಕೊಳ್ಳುವುದಾಗಿದ್ದರೆ ಅದು ಸರಿಯಾದ ಸರ್ಕಾರವಲ್ಲ that is not the governance at all ಆದುದರಿಂದ, ಡಿವಿಜನಲ್ ಕಮೀಷನರ್ ಕಡೆಯಿಂದ ಎನ್‌ಕ್ವೈರಿ ಎಂದರೆ ಒಂದು ವರದಿ ತರಿಸಿಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಸಸ್ಪೆಂಡ್ ಮಾಡುವುದಿಲ್ಲ, ವರ್ಗಾವಣೆಯನ್ನೂ ಮಾಡುವುದಿಲ್ಲ, ಅವರನ್ನು ಅಲ್ಲಿಯೇ ಇಟ್ಟುಕೊಂಡು ಅನುಭವಿಸಿ. ನಿಮಗೆ ಡಿವಿಜನಲ್ ಕಮೀಷನರ್ ಕಡೆಯಿಂದ ಎನ್‌ಕ್ವೈರಿ ಮಾಡಿಸುವುದಕ್ಕೆ ಆಗುತ್ತದೋ ಇಲ್ಲವೋ?

ಶ್ರೀ ವಾಟಾಳ್ ನಾಗರಾಜ್ : ಒಂದು ಸಾಮಾನ್ಯ ಬೇಡಿಕೆಗೆ ಇಷ್ಟೊಂದು ಪ್ರಶ್ನೆಗಳಿರುವಾಗ, ವಿಭಾಗಾಧಿಕಾರಿಗಳಿಂದ ವರದಿ ತರಿಸಿಕೊಳ್ಳುವುದಾಗಿ ನೀವು ಏನು ಹೇಳುತ್ತಿದ್ದೀರಿ. ಒಂದು ಹಂತದಲ್ಲಿ ಎಫ್.ಐ.ಆರ್. ಹಾಕಿರುವುದು ಸರಿಯಲ್ಲವೆಂದು ಮತ್ತು ಕೇಸುಗಳನ್ನು ಹಿಂತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಲ್ಲದೆ, ಶೇಕಡ ತೊಂಭತ್ತು ಭಾಗ ಎಲ್ಲಾ ವಿಚಾರಗಳನ್ನು ಒಪ್ಪಿದ್ದೀರಿ. ವರದಿ ಬರಲಿ ಎಂದರೆ ಏನು? ವರದಿಗಿಂತ ಹೆಚ್ಚಾಗಿ ನೀವೇ ತೀರ್ಮಾನ ತೆಗೆದುಕೊಂಡಿದ್ದೀರಿ. ಸಂಪೂರ್ಣವಾಗಿ ಕೇಸುಗಳನ್ನು ಹಿಂತೆಗೆದುಕೊಂಡಿದ್ದೇವೆ, ಇದು ಅಕ್ರಮವಾಗಿದೆ, ಈ ರೀತಿ ಶಾಸಕರಿಗೆ ಅನ್ಯಾಯ ಮಾಡಿರುವುದು ಸರಿಯಲ್ಲವೆಂದು ಹೇಳುತ್ತಿದ್ದೀರಿ. ಆದುದರಿಂದ, ವರದಿಯ ಬದಲು ವಿಭಾಗಾಧಿಕಾರಿಗಳಿಂದ ತನಿಖೆ ನಡೆಸುತ್ತೇವೆಂದು ಅಷ್ಟಾದರೂ ತಾವು ಭರವಸೆ ಕೊಡುವುದಕ್ಕಾಗುವುದಿಲ್ಲವೇ? ಕೊಡಿ, ದಯವಿಟ್ಟು ತಾವು ಅದನ್ನು ಮಾಡಲಿಲ್ಲವೆಂದರೆ ನಾವೂ ಧರಣಿ ಕುಳಿತುಕೊಳ್ಳುತ್ತೇವೆ.

(ಈ ಹಂತದಲ್ಲಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಸದಸ್ಯರಾದ ವಾಟಾಳ್ ನಾಗರಾಜ್ ಅವರನ್ನೊಳಗೊಂಡಂತೆ ಭಾರತೀಯ ಜನತಾ ಪಕ್ಷದ ಇತರ ಸದಸ್ಯರುಗಳೂ ಸದನದ ಬಾವಿಗೆ ಬಂದು ಧರಣಿ ಹೂಡಿದರು)

ಶ್ರೀಮತಿ ಪ್ರಮೀಳಾ ನೇಸರ್ಗಿ : Creating and manipulating the FIR. ಇದರಲ್ಲಿ ಫ್ಯಾಬ್ರಿಕೇಟಿಂಗ್ ಎವಿಡೆನ್ಸ್ ಆಗಿಲ್ಲವೇ? ಏನಿದು?

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, ನಮ್ಮ ನಾಯಕರಾದ ಯಡಿಯೂರಪ್ಪನವರು ಬಹಳ ಸ್ಪಷ್ಟವಾಗಿ ಹೇಳಿದರು. ಸನ್ಮಾನ್ಯ ಸಚಿವರಾದ ಸಿಂಧ್ಯರವರು ಮಾತನಾಡುತ್ತಾ ನೀವು ಧರಣಿ ಮಾಡುವುದಿಲ್ಲವೆಂದು ಹೇಳಿದ್ದೀರೆಂದು ಪ್ರಸ್ತಾಪಿಸಿದರು. ಹೌದು, ಹಾಗೆ ಹೇಳಿದ್ದು ನಿಜ. ವಿಶೇಷ ಸಂದರ್ಭದಲ್ಲಿ ಇದು ಪ್ರಜಾಪ್ರಭುತ್ವಕ್ಕೆ ಕೊಡಲಿ ಪೆಟ್ಟೆಂದು ಹೇಳಿದೆ. ಇವೊತ್ತು ಜನಸಾಮಾನ್ಯರ

ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟ ಮಾಡುವುದಕ್ಕೆ ವಿರೋಧ ಪಕ್ಷಗಳಿವೆ. ಅಂತಹ ಹೋರಾಟ ಮಾಡುತ್ತಿರುವ ಸಂದರ್ಭದಲ್ಲಿ ಜೈಲಿಗೂ ಹೋಗುತ್ತಿದ್ದೇವೆ, ಏನು ಬೇಕಾದರೂ ಕೇಸ್ ಹಾಕಿಕೊಳ್ಳಿ. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ವರ್ಷಾನುಗಟ್ಟಳೆ ಜೈಲಿನಲ್ಲಿ ಇದ್ದು ಬಂದವರು ನಾವು, ಆ ಭಯ ನಮಗಿಲ್ಲ. ಆದರೆ, ವಿಶೇಷವಾಗಿ ನಮಗೆ ಇಲ್ಲಿ ಬಂದಿರುವ ಪ್ರಶ್ನೆಯೇನೆಂದರೆ, ಯಾವುದೇ ಅಧಿಕಾರಿ ಡಿಕ್ಟೇಟರ್‌ಶಿಪ್ ಮಾಡಿದಾಗ ಅಂತಹ ಡಿಕ್ಟೇಟರ್‌ಗೆ ಸೂಪರ್ ಡಿಕ್ಟೇಟರ್ ರಕ್ಷಣೆ ಕೊಡುತ್ತಿದ್ದಾರಲ್ಲ, ಅದಕ್ಕೋಸ್ಕರ ನಮ್ಮ ಧರಣೆ ಎಂಬುದು ಸನ್ಮಾನ್ಯ ಸಿಂಧ್ಯರವರು ಅರ್ಥ ಮಾಡಿಕೊಳ್ಳಬೇಕು. ಇದರಲ್ಲಿ ಯಾರೋ ಒಬ್ಬರಿಗೆ ರಕ್ಷಣೆ ಕೊಟ್ಟು ಸರ್ಕಾರ ಇದನ್ನು ಪ್ರತಿಷ್ಠೆಗೆ ತೆಗೆದುಕೊಳ್ಳುತ್ತಿರುವುದು ತುಂಬಾ ಆಶ್ಚರ್ಯಕರವಾಗಿದೆ. ಹೀಗಾಗಿ, ಸನ್ಮಾನ್ಯ ಯಡಿಯೂರಪ್ಪನವರು ಹೇಳಿರುವ ಪ್ರಕಾರ ಒಂದು ರೀತಿಯಲ್ಲಿ ಸರ್ಕಾರ ದೂಳು ಒರೆಸುವಂಥ ಪ್ರಯತ್ನ ಮಾಡುತ್ತಿದೆ, ಇದನ್ನು ಮಾಡುವುದಕ್ಕೆ ನಾವು ಬಿಡುವುದಿಲ್ಲ. ನೀವು ಆಡಿದ ಆಟವೆಲ್ಲವನ್ನೂ ನೋಡುತ್ತಾ ಕುಳಿತುಕೊಳ್ಳುವುದಕ್ಕೆ ವಿರೋಧ ಪಕ್ಷವಿಲ್ಲ. ಜನಸಾಮಾನ್ಯರ ಪರ ಹೋರಾಟ ಮಾಡುತ್ತೇವೆ, ಧರಣೆ, ಸತ್ಯಾಗ್ರಹ ಮಾಡುತ್ತೇವೆ, ಸಂದರ್ಭ ಬಂದರೆ ಈ ಸರ್ಕಾರವನ್ನು ಹೊರಗಡೆ ಹಾಕುತ್ತೇವೆ. ಇದರಲ್ಲಿ ಅನುಮಾನವೇನೂ ಇಲ್ಲ. ಅದಕ್ಕೋಸ್ಕರ ಈಗಿರುವ ಪ್ರಶ್ನೆಯೇನೆಂದರೆ, ಜನಸಾಮಾನ್ಯರ ಪರವಾಗಿ ಹೋರಾಟ ಮಾಡುತ್ತಿರುವ ಸಂದರ್ಭದಲ್ಲಿ ನಮ್ಮ ಶಾಸಕರುಗಳ ಮೇಲೆ ಈ ರೀತಿ ಕೇಸುಗಳನ್ನು ಹಾಕಿರುವ ಸಂದರ್ಭದಲ್ಲಿ ಈ ರೀತಿ ಮಾಡಿರುವುದು ತಪ್ಪೆಂದು ಸರ್ಕಾರ ಸ್ಪಷ್ಟವಾಗಿ ಒಪ್ಪಿಕೊಂಡಿದೆ. ಮತ್ತು ಈ ಹಿನ್ನೆಲೆಯಲ್ಲಿ ತಪ್ಪು ಮಾಡಿದಂಥ ಅಧಿಕಾರಿಯನ್ನು ಡಿಸ್‌ಮಿಸ್ ಮಾಡಿ ಎಂದು ನಾವು ಕೇಳಲಿಲ್ಲ, ಸಸ್ಪೆಂಡ್ ಮಾಡಿ ಎಂದು ಕೇಳಿದೆವು. ಸಸ್ಪೆಂಡ್ ಮಾಡುವುದಕ್ಕೂ ಕೂಡ ಒಪ್ಪದಿದ್ದಾಗ ನಮ್ಮ ನಾಯಕರಾದ ಯಡಿಯೂರಪ್ಪನವರು ಕನಿಷ್ಠ ಪಕ್ಷ ಅವರನ್ನು ಟ್ರಾನ್ಸ್‌ಫರ್ ಮಾಡಿ ಎಂದು ಕೇಳಿದರು, ಅದಕ್ಕೂ ಬೇಡವೆಂದಾಗ ನಂತರ ಆ ಕುರಿತ ವಿಚಾರಣೆ ನಡೆಸುವುದಕ್ಕೂ ಇವರು ತಯಾರಿಲ್ಲವೆಂದರೆ, ಈ ಸರ್ಕಾರ ಖಂಡಿತವಾಗಿಯೂ ಡಿಕ್ಟೇಟರ್‌ಗಳಿಗೆ ಬೆಂಬಲ ಕೊಡುತ್ತಿದೆ. ಆದುದರಿಂದ ಪ್ರಜಾಪ್ರಭುತ್ವ ಉಳಿವಿಗೋಸ್ಕರ ನಾವು ಈ ಧರಣೆ ಮಾಡುತ್ತಿದ್ದೇವೆ, ಧರಣೆಯನ್ನು ನಾವೆಲ್ಲರೂ ಮಾಡುವುದಕ್ಕೆ ಇಷ್ಟಪಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಈಶ್ವರಪ್ಪನವರು ಧರಣೆ ಹೂಡಲು ಸದನದ ಬಾವಿಯತ್ತ ತೆರಳಿದರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರನ್ನು ಸಸ್ಪೆಂಡ್ ಮಾಡುವುದಿಲ್ಲ, ಟ್ರಾನ್ಸ್‌ಫರ್ ಸಹ ಮಾಡುವುದಿಲ್ಲವೆಂದರು. ಇನ್ನು ಡಿವಿಜನಲ್ ಕಮೀಷನರ್ ಅವರಿಂದ ಎನ್‌ಕ್ವೈರಿ ಮಾಡಿಸುವುದಕ್ಕೆ ಏನು ತೊಂದರೆ ಇದೆ? ಇಷ್ಟು ಜನ ಶಾಸಕರುಗಳು ಒತ್ತಾಯ ಮಾಡುತ್ತಿದ್ದರೂ ಡಿವಿಜನಲ್ ಕಮೀಷನರ್ ಅವರಿಂದ ಎನ್‌ಕ್ವೈರಿ ಮಾಡಿಸುವುದಕ್ಕೆ ಏನಾಗುತ್ತದೆ? ಮಾನ್ಯ ಉಪಾಧ್ಯಕ್ಷರೆ, ನೀವಾದರೂ ಇದರಲ್ಲಿ ಇಂಟರ್‌ವಿನ್ ಆಗಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಪ್ರಕರಣದಲ್ಲಿ ಅವರನ್ನು ಟ್ರಾನ್ಸ್‌ಫರ್ ಮಾಡಬೇಕೆಂದು ಕೇಳಿದರು, ಅದನ್ನು ಕೈಬಿಟ್ಟರು, ಅನಂತರ, ಸಸ್ಪೆನ್‌ಷನ್ ಮಾಡಬೇಕೆಂದು ಕೇಳಿದರು, ಅದಕ್ಕೂ

ಕೈಬಿಟ್ಟರು. ಕನಿಷ್ಠ ಪಕ್ಷ ಡಿವಿಜನಲ್ ಕಮೀಷನರ್ ಅವರಿಂದ ನೀವು ಎನ್‌ಕ್ವೈರಿಯನ್ನು ಇನ್‌ಸ್ಟಿಟ್ಯೂಟ್ ಮಾಡಬೇಕೆಂದು ಕೇಳಿದರು. ಈಗ ಕಾಂಟ್ರಡಿಕ್ಟರಿ ವ್ಯೂಸ್ ಏನೆಂದರೆ, ಎಫ್.ಐ.ಆರ್‌ನಲ್ಲಿರುವುದು ಸರಿಯಲ್ಲವೆಂದು ಸಹಜವಾಗಿ ತಾವೇ ಒಪ್ಪಿಕೊಂಡು ಹೇಳಿದ್ದೀರಿ. ಇದನ್ನು ಏಕೆ ಮಾಡಿದರು ಎನ್ನುವುದರ ಬಗ್ಗೆ ಎನ್‌ಕ್ವೈರಿ ಆಗಬೇಕಲ್ಲ. ಮಾಡಿದ್ದು ಸರಿಯೇ ? ಇಲ್ಲವೇ ? ಅಥವಾ ಹೆಣ್ಣುಮಗಳು ಕೊಟ್ಟಿರುವಂಥ ಸ್ಟೇಟ್‌ಮೆಂಟ್ ಸರಿಯಿದೆಯೇ ? ಇಲ್ಲವೇ ? ಇದರ ಬಗ್ಗೆ ಎನ್‌ಕ್ವೈರಿ ಆಗಬೇಕು ತಾನೇ ? ಎನ್‌ಕ್ವೈರಿ ಆಗಿ ಅದರ ರಿಪೋರ್ಟ್ ಬಂದನಂತರ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಇದರಲ್ಲಿ ಪ್ರತಿಷ್ಠೆ ವಿಷಯವೇನಿದೆ ?

ಶ್ರೀ ಎಂ.ಪಿ. ಪ್ರಕಾಶ್ : ಒಂದು ವರದಿಯನ್ನು ತರಿಸಿಕೊಳ್ಳುತ್ತೇವೆಂದರೆ ವರದಿ ಶೂನ್ಯದಿಂದ ಬರುವುದಿಲ್ಲ. ಅದರ ಬಗ್ಗೆ ವಿಚಾರಣೆ ಮಾಡಿ ಅವರು ವರದಿ ಕಳುಹಿಸಿಕೊಡುತ್ತಾರೆ. ಆದುದರಿಂದ, ಪ್ರಶ್ನೆಯೇನೆಂದರೆ, ಇಟ್ ಈಸ್ ಎ ರಿಪೋರ್ಟ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ರಿಪೋರ್ಟ್ ಬೇರೆ, ಎನ್‌ಕ್ವೈರಿ ಬೇರೆ. ಎನ್‌ಕ್ವೈರಿ ಮಾಡಿಸುವುದರಲ್ಲಿ ಏನಿದೆ ?

ಶ್ರೀ ಎಂ.ಪಿ. ಪ್ರಕಾಶ್ : ಆಗಬಹುದು. ಎನ್‌ಕ್ವೈರಿ ಮಾಡದೆ ಯಾರೂ ವರದಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಪದಗಳ ವಿಚಾರದಲ್ಲಿ ವ್ಯತ್ಯಾಸವಿರುವುದಾದರೆ ಎನ್‌ಕ್ವೈರಿ ಮಾಡಿ ಎಂದು ನಾವು ಕಳುಹಿಸಿಕೊಡುತ್ತೇವೆ, ಅವರು ಎನ್‌ಕ್ವೈರಿ ಮಾಡುತ್ತಾರೆ. ಈಗ ದಯವಿಟ್ಟು ಮಾನ್ಯ ಶಾಸಕರುಗಳು ಧರಣಿ ನಿಲ್ಲಿಸಿ ತಮ್ಮ ಸ್ಥಾನಗಳಿಗೆ ಹೋಗಬೇಕು. ಮಾನ್ಯ ಉಪಾಧ್ಯಕ್ಷರೇ, ಈ ವಿಚಾರಗಳ ಬಗ್ಗೆ ಎನ್‌ಕ್ವೈರಿ ಮಾಡದೇ ವರದಿ ಕೊಡುವುದಕ್ಕೆ ಆಗುವುದಿಲ್ಲವಾದ ಕಾರಣ ಎಲ್ಲಾ ಸದಸ್ಯರು ಎನ್‌ಕ್ವೈರಿ ಮಾಡಿಸುವುದಕ್ಕೆ ಒತ್ತಾಯ ಮಾಡುತ್ತಿರುವುದರಿಂದ ಎನ್‌ಕ್ವೈರಿ ಮಾಡಿಯಾದ ಮೇಲೆಯೇ ವರದಿಯನ್ನು ಕಳುಹಿಸುವಂತೆ ನಾವು ವಿಭಾಗಾಧಿಕಾರಿಗಳಿಗೆ ಹೇಳುತ್ತೇವೆ.

(ಧರಣಿ ಕುಳಿತಿದ್ದ ವಿರೋಧ ಪಕ್ಷದ ಎಲ್ಲಾ ಸದಸ್ಯರು ಬಾವಿಯಿಂದ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು)

ಉಪಾಧ್ಯಕ್ಷರು : ಈಗ ತಂದಿದ್ದಂಥ ನಿಲುವಳಿ ಸೂಚನೆಗೆ ಸರ್ಕಾರದ ಉತ್ತರದ ನಂತರ ಈಗ ಇದನ್ನು ಇಲ್ಲಿಗೇ ಕೈಬಿಡಲಾಗಿದೆ.

ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಅರಣ್ಯ ಪ್ರದೇಶದ ವಿಸ್ತೀರ್ಣ

191 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು ?